ಶಾಂತಿನಾಥ ಕವಿ

ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಕಮಲಾ ಹಂಪನಾ

ಶಾಂತಿನಾಥ ಕವಿ

ಕಮಲಾ ಹಂಪನಾ

ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SHANTINATHA KAVI
by Smt. Kamala Hampana
Published by the Bangalore University, Bangalore
pp. 48 + viii. 1972

ಪ್ರಕಾಶಕರು :

ಕೆ. ಸಿ. ಶಿವಪ್ಪ
ಕೋ-ಆರ್ಡಿನೇಟರ್
ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಬೆಲೆ: 50 ಪೈಸೆ

ಮುದ್ರಕರು :

ಡಬ್ಲ್ಯು. ಕ್ಯು. ಜಡ್ಜ್ ಪ್ರೆಸ್, ಬೆಂಗಳೂರು 25

ಮುನ್ನುಡಿ

ವಿಶ್ವವಿದ್ಯಾಲಯಗಳು ಕೇವಲ ತಿಳುವಳಿಕೆಯ ಕೇಂದ್ರಗಳಾದರೆ ಸಾಲದು. ಅವು ಸುತ್ತಮುತ್ತಲಿನ ಜನತೆಯ ಶೈಕ್ಷಣಿಕ-ಸಾಂಸ್ಕೃತಿಕ ಆಗುಹೋಗುಗಳಲ್ಲಿ ಸಹ ಸಕ್ರಿಯವಾಗಿ ಪಾಲ್ಗೊಳ್ಳುವುದು ಅವಶ್ಯಕ. ಪಾಠಪ್ರವಚನ, ಉನ್ನತ ವ್ಯಾಸಂಗ ಮತ್ತು ಸಂಶೋಧನೆಗಳಿಗೆ ಮಾತ್ರ ವಿಶ್ವವಿದ್ಯಾಲಯಗಳ ಕಾರ್ಯವ್ಯಾಪ್ತಿ ಸೀಮಿತವಾಗಿರಬಾರದು. ಸಾಮಾನ್ಯ ಜನತೆಯಲ್ಲಿ ಅರಿವಿನ ಸಿರಿಯನ್ನು ಹಂಚುವ ಹೊಣೆ ಹೊತ್ತು ವಿಶ್ವವಿದ್ಯಾಲಯಗಳು ಜ್ಞಾನ ಪ್ರಸಾರ ಕೇಂದ್ರಗಳಾಗಿ ಮುನ್ನಡೆಯಬೇಕು.

ಬೆಂಗಳೂರು ವಿಶ್ವವಿದ್ಯಾಲಯವು ಕಳೆದ ನಾಲ್ಕೈದು ವರ್ಷಗಳಿಂದ ನಗರದ ನಾನಾ ಸಂಘಸಂಸ್ಥೆಗಳಲ್ಲಿ, ಕಾರ್ಖಾನೆ ಕಾರ್ಮಿಕ ಕೂಟಗಳಲ್ಲಿ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸುತ್ತ ಬಂದಿದೆ. ಆಯಾ ವಿಷಯಗಳಲ್ಲಿ ಪರಿಣತರಾದವರು ಭಾಷಣಗಳನ್ನು ನೀಡಿ, ಅನಂತರ ಅವುಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸಲು ನಮ್ಮೊಡನೆ ಸಹಕರಿಸುತ್ತಿರುವುದು ಸಂತಸದ ಸಂಗತಿ. ಅತ್ಯಧಿಕ ಸಂಖ್ಯೆಯಲ್ಲಿ ನಮ್ಮ ಜನತೆಯ ಕೈಸೇರಲೆಂದು ಈ ಕಿರುಹೊತ್ತಿಗೆಗಳನ್ನು ಸುಲಭ ಬೆಲೆಯಲ್ಲಿ ಪ್ರಕಟಿಸುತ್ತಿದ್ದೇವೆ. ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳ ಶ್ರೀಮಂತಿಕೆಯನ್ನು ಹೆಚ್ಚಿಸಿ, ಜನಸಾಮಾನ್ಯರ ತಿಳಿವನ್ನು ಉತ್ತಮಗೊಳಿಸುವ ದಿಸೆಯಲ್ಲಿ ಈ ಹೊತ್ತಿಗೆಗಳು ಸಹಕಾರಿಯಾಗಲೆಂದು ನಾನು ಮನಸಾರೆ ಹಾರೈಸುತ್ತೇನೆ.

ಟಿ. ಕೆ. ತುಕೋಳ್

ಸೆಪ್ಟಂಬರ್ 4, 1972 ಉಪಕುಲಪತಿ

ಅರಿಕೆ

ಬೆಂಗಳೂರು ವಿಶ್ವವಿದ್ಯಾಲಯದ ಪ್ರಕಟಣ ಮತ್ತು ಪ್ರಚಾ-ರೋಪನ್ಯಾಸ ವಿಭಾಗದವರ ಆಶ್ರಯದಲ್ಲಿ ನಾನು ಮಲ್ಲೇಶ್ವರದ ವಾಸವಿ ಮಹಲಿನಲ್ಲಿ ಮಾಡಿದ ಉಪನ್ಯಾಸ ಈಗ ಪುಸ್ತಕರೂಪದಲ್ಲಿ ಹೊರಬರುತ್ತಿದೆ.

ಶಾಂತಿನಾಥ ಹಳಗನ್ನಡ ಕವಿಗಳಲ್ಲಿ ಪಂಪನ ಹೆಜ್ಜೆ ಹಾದಿ ಅನುಸರಿಸಿರುವ ಹಿರಿಯ ಕವಿ. ಅವನ ಕಾವ್ಯವಾದ ಸುಕುಮಾರ ಚರಿತೆ ಅನೇಕ ದೃಷ್ಟಿಗಳಿಂದ ಗಮನಾರ್ಹ ಚಂಪೂ ಕೃತಿ. ಆರೇಳು ವರ್ಷಗಳ ಹಿಂದೆ ಸುಕುಮಾರ ಚರಿತೆ ಸಂಗ್ರಹವನ್ನು ಸಿದ್ಧಪಡಿಸಿದಾಗ ಇಂತಹುದೊಂದು ಕಿರುಹೊತ್ತಗೆಯನ್ನು ಬರೆಯುವ ಯೋಚನೆಯಿತ್ತು. ಇಂದು ಅದು ಕೈಗೂಡಿದೆ.

ಈ ಉಪನ್ಯಾಸದ ಏರ್ಪಾಟಿಗೂ, ಇದರ ಮುದ್ರಣಕಾರ್ಯದ ಅಚ್ಚುಕಟ್ಟಿಗೂ ಆರಂಭದಿಂದ ಕಾರಣರಾದ ಸೋದರ ಶ್ರೀ ಕೆ. ಸಿ ಶಿವಪ್ಪನವರಿಗೂ, ಹಿಂದ್ ವಿದ್ಯಾರ್ಥಿ ಯುವಕ ಸಮ್ಮೇಲನದ ಅಧ್ಯಕ್ಷ ಶ್ರೀ ಕಲ್ಲೆ ಶಿವೋತ್ತಮ ಅವರಿಗೂ, ಇದನ್ನು ಅಂದವಾಗಿ ಮುದ್ರಿಸಿರುವ ಮುದ್ರಣಾಲಯದವರಿಗೂ ನನ್ನ ನೆನಕೆಗಳು.

ಕಮಲಾ ಹಂಪನಾ

ಶಾಂತಿನಾಥ ಕವಿ

ಕವಿ ಪರಿಚಯ

ಸುಕುಮಾರ ಚರಿತೆಯೆಂಬ ಈ ಹಿರಿಯ ಕಾವ್ಯವನ್ನು ಬರೆದವನು ವಿದ್ವಜ್ಜನರಿಂದ –

"ಸಹಜಕವಿ ಚತುರಕವಿ ನಿ
ಸ್ಸಹಾಯಕವಿ ಸುಕವಿ ಸುಕರಕವಿ ಮಿಥ್ಯಾತ್ವ
ಪ್ರಹರಕವಿ ಸುಭಗಕವಿ ನುತ
ಮಹಾಕವೀಂದ್ರಂ ಸರಸ್ವತೀ ಮುಖ ಮುಕುರಂ."

–ಎಂಬ ಸಹಜ ಪ್ರಶಂಸೆಗೆ ಮಾನ್ಯನಾದ ಶಾಂತಿನಾಥ ಕವಿ. ಪಂಪ-ರನ್ನರು ಹೇಳಿಕೊಂಡಂತೆ ಶಾಂತಿನಾಥನೂ ತನ್ನ ಗ್ರಂಥ-ಶಾಸನಗಳಲ್ಲಿ ಜೀವನ ವಿಚಾರವಾಗಿ ಕೆಲವು ವಿವರಗಳನ್ನು ತಿಳಿಸಿದ್ದಾನೆ. ಶಾಂತಿನಾಥನ ತಂದೆ ಜಿನಸಮಯಕ್ಕೆ ಸೇರಿದ ಗೋವಿಂದರಾಜ. ಗುರು ವರ್ಧಮಾನ ಯತಿಗಳು. ವಾಗ್ಭೂಷಣನಾದ ರೇವಣ. ಕವಿಯ ತಮ್ಮ; ಕರ್ಣಪಾರ್ಯ ಹಿರಿಯ ಅಣ್ಣ.

"ಜನಕಂ ಶ್ರೀ ಜೈನಭಾಸ್ವತ್ ಕ್ರಮಯುಗಲ ಸರೋಜಾತ ಭೃಂಗಂ ವಿಶಿಷ್ಟೇ
ಷ್ಟನಿಧಾನಂ ಸತ್ಯ ರತ್ನಾಕರನೆನಿಸಿದ ಗೋವಿಂದರಾಜಂ ಮುನೀಂದ್ರಾ
ಧಿನುತ ಶ್ರೀ ವರ್ಧಮಾನ ವ್ರತಿಪತಿಗಳುಪಾಧ್ಯಾಯರಾರ್ಹಂತ್ಯ ಧರ್ಮಂ
ತನಗಾಮರ್ಮಂ ಭೂಷೆ ರತ್ನತ್ರಯಮೆನೆ ನೆಗಳ್ದಂ ಧಾತ್ರಿಯೊಳ್
ಶಾಂತಿನಾಥಂ"

ತನ್ನ ತಂದೆಯ ದೈವಭಕ್ತಿಯನ್ನು, ಧರ್ಮಶ್ರದ್ಧೆಯನ್ನು ತನ್ನ ಆಚಾರ್ಯರ ವಾತ್ಸಲ್ಯವನ್ನು ಶಿಷ್ಯವೃಂದದ ಜೊತೆಗೆ ಶಾಂ ನಾಥನು ಸ್ವತಃ ತಾನು ಜೈನ ಧರ್ಮಾನುಯಾಯಿಯಾಗಿದ್ದಾನೆಂ ದನ್ನು ಹೇಳಿಕೊಂಡಿದ್ದಾನೆ. ಅವನಿಗೆ ಮೋಕ್ಷ ಮಾರ್ಗವ ತೋರುವ ರತ್ನತ್ರಯಗಳೇ ಅಲಂಕಾರವಾಗಿದೆಯಂತೆ. ಶಾಂ ನಾಥನಿಗೆ ತನ್ನ ಜಿನಮತ-ಜೈನಧರ್ಮದಲ್ಲಿ ಅಪಾರ ಶ್ರ ಅನಂತ ಗೌರವ. ಅಮಿತವಾದ ಆಸಕ್ತಿ, ಅತಿಶಯವಾದ ಅನುರಾ ತನ್ನ ಸ್ವಧರ್ಮವಾದ ಜಿನಧರ್ಮವೇ ಪರಮ ಧರ್ಮವೆ ನಂಬಿಕೆ. ಅಲ್ಲದೆ ಜಿನಮತವೇ ಉದಾತ್ತ ಮತವೆಂದೂ. ಜಿ ತತ್ತ್ವವೇ ಪರಮ ತತ್ತ್ವವೆಂದೂ. ಜಿನಮಾರ್ಗವೇ ಶ್ರೇಯಮಾ ವೆಂದೂ ಶಾಂತಿನಾಥನ ಅಚಲವಾದ ವಿಶ್ವಾಸ.

ಸುಕವೀಂದ್ರರುಂ, ವಿನೇಯಜನರುಂ 'ಈ ಸುಕುಮಾರ ಚ ದೊಳ್ ನೋೞ್ಪು ಕಾವ್ಯಧರ್ಮಮುಮಂ ಜಿನಧ ಮುಮಂ' ಎಂದು ಮಹಾಕವಿ ಹಂಪನಂತೆ ಶಾಂತಿನಾಥ ಕವಿಯ ತನ್ನ ಕಾವ್ಯಾರಂಭದಲ್ಲೇ ಉದ್ಘೋಷಿಸಿದ್ದಾನೆ. ಶಾಂತಿನಾಥ ಕವಿ ಈ ಸವಾಲನ್ನು ವಿಮರ್ಶೆಯ ದೃಷ್ಟಿಯಿಂದ ಸವಿಸ್ತಾರವಾಗ ಬಯಸುವುದಕ್ಕೆ ನೆರವೇರಿರುವುದು ಸ್ಪಷ್ಟವಾಗಿ ಕಾಣುತ್ತದೆ. ಕಾ ಪಾಕದಲ್ಲಿ ಧರ್ಮ ಪ್ರತ್ಯೇಕವಾಗಿ ಬರದೆ ಇಲ್ಲದೆ ಸಮನ್ವಯವ ಸೇರಿದೆ. ಶಾಂತಿನಾಥನು ಕಾವ್ಯಧರ್ಮದ ಮಾಧುರ್ಯವನ್ನು, ಜಿ ಧರ್ಮದ ಮಹಿಮೆಯನ್ನು ಸುಕುಮಾರ ಚರಿತೆಯ ರಚನಾಕೌ ದವಾಗಿ ಬಿಂಬಿಸಿಕೊಟ್ಟಿದ್ದಾನೆ.

ರತ್ನತ್ರಯರೂ, ಜಿನಸಮಯದೀಪಕರೂ, ಮಹಾಕವಿಗ ಆದ ಪಂಪ ಪೊನ್ನ ರನ್ನರು ಪ್ರಮುಖವಾಗಿ ಬೆಳಸಿದ ಕಾ ಮಾರ್ಗದಲ್ಲಿ ತಮ್ಮ ಕೃತಿಯ ಪ್ರಾವೀಣ್ಯವನ್ನು ಸಾ

ವಿನಮ್ರ ಶಿಷ್ಯರಾಗಿ ಹಿಂಬಾಲಿಸಿದ ಹಲವು ಕನ್ನಡ ಕವಿಗಳಲ್ಲಿ ಶಾಂತಿನಾಥ ಅತ್ಯಂತ ಗಮನಾರ್ಹನಾದ ಹಿರಿಯ ಕವಿ. ಕನ್ನಡದ ಪ್ರಸಿದ್ಧ ಕವಿಗಳಲ್ಲಿ ಕೆಲವರು ಕಾವ್ಯಗಳನ್ನು ರಚಿಸುವುದರ ಜೊತೆಗೆ ಶಾಸನಗಳನ್ನೂ ರಚಿಸಿದ್ದಾರೆ. ರನ್ನ-ಜನ್ನ ಮೊದಲಾದ ಕವಿಗಳು ಈ ಸಾಲಿಗೆ ಸೇರಿದವರು. ಶಾಂತಿನಾಥ ಕವಿಯೂ ಈ ಸುಕುಮಾರ ಚರಿತೆ ಕಾವ್ಯವಲ್ಲದೆ ಶಾಸನವನ್ನೂ ಬರೆದಿರುವಂತೆ ತಿಳಿದುಬರುತ್ತದೆ. ಶಿಕಾರಿಪುರದ 136 ನೆಯ ಶಾಸನ ಕನ್ನಡದಲ್ಲಿ ಸಿಗುವ ಕಾವ್ಯಮಯವಾದ ಶಾಸನಗಳಲ್ಲೊಂದು. ಸುಮಾರು ಐವತ್ತು ಪದ್ಯಗಳನ್ನೊಳಗೊಂಡ ಚಂಪೂಶೈಲಿಯ ಆ ಶಾಸನದ ಶೈಲಿ ಮತ್ತು ಪದ್ಯಗಳು ಸುಕುಮಾರ ಚರಿತೆ ಕಾವ್ಯದ ಶೈಲಿ ಮತ್ತು ಪದ್ಯಗಳೊಡನೆ ಅತ್ಯಂತ ನಿಕಟ ಸಂಬಂಧ ಸಾದೃಶ್ಯ ಹೊಂದಿವೆ. ಅಲ್ಲದೆ ಸುಕುಮಾರ ಚರಿತೆ ಕಾವ್ಯದ ಅನೇಕ ಪದ್ಯಗಳು ಯಾವ ಬದಲಾವಣೆಯೂ ಇಲ್ಲದೆ ಶಿಕಾರಿಪುರದ ಶಾಸನದಲ್ಲಿ ಸೇರಿ ಹೋಗಿವೆ. ಆ ಶಾಸನ ಶಾಂತಿನಾಥ ಕವಿಯಿಂದಲೇ ರಚಿತವಾದುದೆಂದು ನಿಸ್ಸಂದೇಹವಾಗಿ ಹೇಳಬಹುದು. ಆಚಾರ್ಯ ಶ್ರೀ ಡಾ. ಲ. ನರಸಿಂಹಾಚಾರ್ಯರು ಈ ವಿಚಾರದಲ್ಲಿ ಸಂಶೋಧನೆ ನಡೆಸಿ ಆ ಶಾಸನ ಶಾಂತಿನಾಥ ಕವಿಯಿಂದಲೇ ರಚಿತವಾಗಿರಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಹಲವು ಆಧಾರಗಳಿಂದ ಅವರ ಅಭಿಪ್ರಾಯ ಮಾನ್ಯವಾಗಿದೆ.

ಶಾಂತಿನಾಥನಿಗೆ ಜಿನಮತಾಂಭೋಜಿನೀ ರಾಜಹಂಸ, ಚತುರ ಕವಿ, ಸರಸ್ವತೀ ಮುಖಮುಕುರ – ಮೊದಲಾದ ಅನೇಕ ಬಿರುದುಗಳಿದ್ದುವು. ಇವನು ಸ್ವಸಾಮರ್ಥ್ಯದಿಂದ ಕಾವ್ಯರಚನಾ ಶಕ್ತಿಯನ್ನು ಗಳಿಸಿಕೊಂಡಂತೆ ಕಾಣುತ್ತದೆ. ಕಾವ್ಯಾರಂಭದಲ್ಲಿ ಅತನು ಸ್ಮರಿಸಿರುವ ಅನೇಕ ಕನ್ನಡ-ಸಂಸ್ಕೃತ ಕವಿಗಳ ಸ್ತುತಿಯನ್ನು ನೋಡಿದರೆ ಶಾಂತಿನಾಥನು ಪ್ರಾಚೀನ ಕಾವ್ಯಗಳನ್ನು ಸತತವಾಗಿ

ಅಭ್ಯಾಸಮಾಡಿದಂತೆ ಕಾಣುತ್ತದೆ. ಅವನ ಸುಕುಮಾರ ಚರಿತೆ
ಶೈಲಿಯನ್ನು ನೋಡಿದರೆ ಸಂಸ್ಕೃತದಲ್ಲಿ ಅತನಿಗೆ ಅಗಾಧವಾ
ಪಾಂಡಿತ್ಯವಿದ್ದಿತೆಂಬುದು ತಿಳಿಯಬರುತ್ತದೆ. ಆದುದರಿಂದ ಶಾಂ
ನಾಥನು ಉಭಯ ಭಾಷಾ ಪಂಡಿತನಾಗಿದ್ದನು. ಅಲ್ಲದೆ ಪ್ರಾಕೃ
ಭಾಷೆಯು ಅಲ್ಪಸ್ವಲ್ಪ ಪರಿಚಯವೂ ಇದ್ದಂತೆ ತೋರುತ್ತದ
ಶಾಂತಿನಾಥನು ಜೈನಾಗಮಗಳನ್ನೂ ಶಾಸ್ತ್ರಗ್ರಂಥಗಳನ್ನೂ ವಿಪು
ವಾಗಿ ಅಭ್ಯಾಸ ಮಾಡಿದ್ದಾನೆ.

> "ಜಿನ ಮಾರ್ಗಂ ಸ್ವೈರಮಾರ್ಗಂ ಜಿನಮತಮೆ ಮತಂ ಜೈನಧರ್ಮ
> ಸ್ವಧರ್ಮ
> ಜಿನತತ್ತ್ವಂ ಸೂಕ್ತತತ್ತ್ವಂ ಜಿನಚರಿತಮೆ ನಿರ್ಗೀತ ಚಾರಿತ್ರಮಾದ
> ತ್ರೈನಕುಂ ವಿದ್ವಜ್ಜನಂ ಬಣ್ಣಿಸೆ ನೆಗಳ್ದುದರಿಂದೀತನತ್ಯಂತ ವಿದ್ವ
> ಜ್ಜನಸಂದೋಹಪ್ರಣೂತಂ ಪರಮ ಜಿನಮತಾಂಭೋಜಿನೀ ರಾಜಹಂಸ

ಶಾಸ್ತ್ರಗ್ರಂಥ ಕರ್ತೃಗಳನ್ನೂ ಬಹುವಾಗಿ ಸ್ತುತಿಸಿದ್ದಾನೆ. ಕವಿಯ
ಗುರುಪರಂಪರೆಯನ್ನು ಕಂಡರೆ ಎಂಥವರಿಗೂ ಬೆರಗು ಮೂಡು
ತ್ತದೆ. ಕನ್ನಡದಲ್ಲಿ ದೀರ್ಘವಾದ ಗುರುಪರಂಪರೆಯನ್ನು ನಿರ್ದೇ
ಸಿರುವ ಕವಿಗಳಲ್ಲಿ ಶಾಂತಿನಾಥ ಮತ್ತು ಶಿಶುಮಾಯಣ ಕವಿಗಳ
ಅಗ್ರಗಣ್ಯರೆಂದು ಕಾಣುತ್ತದೆ. ಶಾಂತಿನಾಥನು ಹೇಳುವ ಗುರ
ಗಳಲ್ಲಿ ಕೆಲವರ ಹೆಸರುಗಳು ನಗರದ 57. 58 ನೆಯ ಶಾಸ
ಗಳಲ್ಲೂ. ಶಿಕಾರಿಪುರದ 136 ನೆಯ ಶಾಸನದಲ್ಲೂ. ಶ್ರವ
ಬೆಳಗೊಳದ 117 ಮತ್ತು 351 ನೆಯ ಶಾಸನಗಳಲ್ಲೂ ಉಲ್ಲೇ
ವಾಗಿರುವುದು ಗಮನಾರ್ಹ.

ಶಾಂತಿನಾಥ ಕವಿ ಸುಕುಮಾರ ಚರಿತೆಯಲ್ಲಿ ತನಗೆ ಆಶ್ರಯ
ಕೊಟ್ಟ ರಾಜನ ಹೆಸರನ್ನೇ ಸ್ಮರಿಸಿಲ್ಲ.

"ಈ ಕೃತಿ ಕೇಳ್ದ ಭವ್ಯನಿವಹಕ್ಕೆ ಚಮತ್ಕೃತಿ ಮೆಚ್ಚುವೊಂಗೆ ಪು
ಣ್ಯಾಕೃತಿ ಭಾರತೀಸತಿಗೆ ಮಾಣಿದಲಂಕೃತಿ ಪುಷ್ಪಚಾಪ ಬಾ
ಣಾಕೃತಿ ಬಾಜಿಸ್ಪೊಂಗೆ ಮುಕುರಾಕೃತಿ ಭಾವಿಸುವೊಂಗಗಾಧ ಬೋ
ಧಾಕೃತಿಯೆಂದೊಡಾರ್ಗಮಿದನಂತನಬುಂತೆನಲೆಂತು ಶೀರ್ಗಮೋ ॥"

ಮತ್ತೀಯು ಕಾವ್ಯ ಪವಿತ್ರವಾದುದು, ಜಿನನ ಮಹಿಮೆಯನ್ನು ಕೊಂಡಾಡುವ ನಿರ್ಮಲ ಚರಿತೆ. ಆದುದರಿಂದ ಧರ್ಮಗ್ರಂಥ ದಲ್ಲಿ ಅನ್ಯಧರ್ಮಕ್ಕೆ ಸೇರಿದ ರಾಜನನ್ನು ಸ್ತುತಿಸುವುದು ಸಾಧು ವಲ್ಲವೆಂದು ಕವಿ ಭಾವಿಸಿ ದೊರೆಯ ಹೆಸರನ್ನು ಕೈಬಿಟ್ಟಿದ್ದಾ ನೆಂದು ಊಹಿಸಬಹುದು. ಆದರೆ ಶಾಂತಿನಾಥನು ಈ ಕಾವ್ಯ ರಚಿಸಿದ ಕಾಲದಲ್ಲಿ ಯಾವ ರಾಜಾಶ್ರಯವೂ ಅವನಿಗೆ ದೊರೆತಿರ ಲಿಲ್ಲವೆಂದು ಹೇಳುವುದು ಸಮಂಜಸವಾಗಿ ಕಾಣುತ್ತದೆ.

ಕವಿಯ ಆಶ್ರಯದಾತ, ಕಾಲ ವಿಚಾರ

ಬನವಸೆ 12000 ಕ್ಕೆ ಅಧಿಪತಿಯೂ. ಮಹಾಮಂಡಲೇಶ್ವ ರನೂ ಆಗಿದ್ದ ಲಕ್ಷ್ಮಣ ರಾಜನೇ (ಲಕ್ಷ್ಮನೃಪ) ಶಾಂತಿನಾಥನಿಗೆ ಆಶ್ರಯಕೊಟ್ಟ ದೊರೆ. ಚಲದಂಕರಾಮ. ರಾಯಗಂಡ ಗೋಪಾಲ ನೃಪ, ಮಂಡಲಿಕ ತ್ರಿಣೇತ್ರ–ಇತ್ಯಾದಿ ಬಿರುದಾಂಕಿತನಾದ ಈ ಲಕ್ಷ್ಮನೃಪನು ಚಾಳುಕ್ಯ ಚಕ್ರವರ್ತಿಗಳಾದ ತ್ರೈಲೋಕ್ಯಮಲ್ಲ ಸೋಮೇಶ್ವರ ಮತ್ತು ಭುವನೈಕಮಲ್ಲ ಸೋಮೇಶ್ವರರ ಕಾಲ ದಲ್ಲಿ, ಅಂದರೆ 1048–1076ರ ಅವಧಿಯಲ್ಲಿ ಪರಾಕ್ರಮಿ ಯಾಗಿದ್ದು ಚಕ್ರವರ್ತಿಗಳ ವಿಶ್ವಾಸಕ್ಕೆ ಪಾತ್ರನಾಗಿದ್ದನು. ಲಕ್ಷ್ಮ ನೃಪನ ರಾಜಭಕ್ತಿಯಿಂದ ಸುಪ್ರೀತರಾದ ಚಕ್ರವರ್ತಿಗಳು ಆನೆ ಕುದುರೆಗಳೊಡನೆ ಬನವಾಸಿ ಪ್ರಾಂತ್ಯವನ್ನು ಬಹುಮಾನವಾಗಿ ಕೊಟ್ಟರು. ಲಕ್ಷ್ಮಣರಾಜನು ಕ್ರಿ.ಶ. 1065–1069 ರವರೆಗೂ ಈ ಬನವಸೆ ಪ್ರಾಂತವನ್ನು ಆಳಿದಂತೆ ಶಾಸನಗಳ ಆಧಾರದಿಂದ ಗೊತ್ತಾಗುತ್ತದೆ.

ಲಕ್ಷ್ಮಣ ರಾಜನ ಆಡಳಿತದ ಅವಧಿಯಲ್ಲಿ ಶಾಂತಿನಾಥನಿಗೆ ಉನ್ನತವಾದ ಸ್ಥಾನಮಾನಗಳು ಲಭಿಸಿದುವು. ಬಹುಶಃ ಸುಕುಮಾರ ಚರಿತೆಯ ರಚನೆಯ ಬಳಿಕ ಅದರ ಕೀರ್ತಿಯನ್ನು ಕರ್ಣಾಕರ್ಣಿಕೆಯಿಂದ ಕೇಳಿದ ದೊರೆ ಶಾಂತಿನಾಥನನ್ನು ತನ್ನ ಆಸ್ಥಾನಕ್ಕೆ ಕರೆಸಿರಬಹುದು. ಇದು ಏನೇ ಇರಲಿ, ಲಕ್ಷ್ಮನೃಪನು ಶಾಂತಿನಾಥನನ್ನು ಅರ್ಥಾಧಿಕಾರಿಯನ್ನಾಗಿಯೂ, ಮಂತ್ರ ನಿಧಾನನಾಗಿಯೂ ನಿಯಮಿಸಿದ್ದನು. ರಾಜಕಾರ್ಯ ಧುರಂಧರನಾದ ಶಾಂತಿನಾಥನು ಆ ರಾಜ್ಯ ಸಮುದ್ಧರಣನೂ ಆಗಿದ್ದನು. ರಾಜ್ಯದ ರಾಜಧಾನಿಯಾದ ಬಳಿ ಗ್ರಾಮದಲ್ಲಿ ದೊರೆಯ ಅನುಮತಿಯನ್ನು ಪಡೆದು ಶಾಂತಿನಾಥನು ಶಾಂತಿ ತೀರ್ಥಂಕರರ ಬಸದಿಯನ್ನು ನಿರ್ಮಿಸಿದನು. ಆ ಬಸದಿಯ ಬಾಗಿಲಲ್ಲಿ ನಿರ್ಮಿತವಾದ ಶಿಲಾಶಾಸನವೇ ಶಿಕಾರಿಪುರದ 136 ನೆಯ ಶಾಸನವಿರಬಹುದೆಂದು ವಿದ್ವಾಂಸರ ಊಹೆ. ಶಾಂತಿನಾಥನು ಮುಕ್ತಕಂಠದಿಂದ ರಾಜನನ್ನು ಸ್ತುತಿಸಿರುವ ಆ ಶಾಸನದ ಕಾಲ ಕ್ರಿ.ಶ. 1068. ಲಕ್ಷ್ಮಣ ರಾಜನು ಬನವಸೆ ಪ್ರಾಂತ್ಯಕ್ಕೆ ಮಹಾಮಂಡಲೇಶ್ವರನಾದದ್ದು ಕ್ರಿ.ಶ. 1066ರಲ್ಲಿ. ಸುಕುಮಾರ ಚರಿತೆ ಅದಕ್ಕಿಂತಲೂ ಮುಂಚೆ ಅಂದರೆ ಕ್ರಿ.ಶ. 1062 ರಲ್ಲಿ ರಚಿತವಾಗಿರಬೇಕು.

ಕಥಾಸಾರ

ಜಂಬೂದ್ವೀಪದ ನಡುವೆ ಮಹಿಮೆಯಿಂದ ಕಂಗೊಳಿಸುವ ಮಂದರ ಪರ್ವತದ ತೆಂಕಣಕ್ಕಿರುವ ವತ್ಸದೇಶದ ರಾಜಧಾನಿಯೇ ಕೌಶಂಬಿಪುರ. ಅದನ್ನು ಆಳುವ ದೊರೆ ಅತಿಬಳ. ಅವನ ಮಂತ್ರಿ ಸೋಮಶರ್ಮ. ಸೋಮಶರ್ಮನ ಪತ್ನಿ ಕಾಶ್ಯಪಿ. ಇವರಿಗೆ ಅಗ್ನಿಭೂತಿ, ವಾಯುಭೂತಿ ಮಕ್ಕಳು. ಅವರು ಚಿಕ್ಕಂದಿನಿಂದಲೂ ಓದುವುದರಲ್ಲಿ ಆಸಕ್ತಿ ತೋರದೆ ವಿಷಯಾಸಕ್ತರಾಗಿ ಕೇಡಾಳಿಗಳಾದರು. ಮಕ್ಕಳಿಂದ ಕುಲಾಪವಾದದ ಪರಾಭವ ದಾವಾನಲದಿಂದ ದಹ್ಯಮಾನ ಮಾನಸನಾಗಿ ಸೋಮಶರ್ಮ ಮಡಿದನು. ಮಂತ್ರಿಯ ಮರಣಕ್ಕೆ ಮಹಾರಾಜ ದುಃಖಿಸಿ ಅಗ್ನಿಭೂತಿ, ವಾಯುಭೂತಿಗಳನ್ನು ಕರೆಸಿ ರಾಜ ಸನ್ಮಾನಗಳಿಂದ ಗೌರವಿಸಿ, ಅವರ ತಂದೆಯ ಪದವಿಯನ್ನು ಕೊಡುವನು.

ಈ ಸನ್ಮಾನದಿಂದ ಸಂತೋಷ ಹೊಂದಿ ಸೋದರರರು ಸುಖಿಸುತ್ತಿರಲು ಒಮ್ಮೆ ವಿಜಯಜಿಹ್ವನೆಂಬ ಪರದೇಶ ವಾದಿ, ವಾದ ಸಂವಾದಾರ್ಥಿಯಾಗಿ ಬಂದು ರಾಜಸಭೆಯನ್ನು ಹೊಕ್ಕು ತನ್ನ ವಾಗ್ವೈಖರಿಯನ್ನು ಪ್ರದರ್ಶಿಸುವನು. ಅವನ ವಾದಕ್ಕೆ ಉತ್ತರಿಸಲು ತನ್ನ ಆಸ್ಥಾನದಲ್ಲಿ ಯಾರೂ ಇರದುದನ್ನು ಕಂಡು ದೊರೆ ಸೋಮಶರ್ಮಾತ್ಮಜರನ್ನು ಕರೆಸುವನು. ಅವರು ಬೆಕ್ಕನ್ನು ಕಂಡ ಇಲಿಯಂತೆ ವಾದಿಯನ್ನು ಕಂಡು ಹೆದರಿ ಕಣ್ಣೀರು ಸುರಿಸಿ ತಲೆತಗ್ಗಿಸಿ ನಿಂತರು. ವ್ಯಾಕುಲಗೊಂಡ ಅತಿಬಳ ಮಹಾರಾಜ ವಿಜಯ ಜಿಹ್ವನನ್ನು ಸನ್ಮಾನಿಸಿ ಮಂತ್ರಿಯ ಮಕ್ಕಳನ್ನು ಓಡಿಸುವನು. ದುಃಖಿತಪ್ತರಾದ ಸೋದರರು ತಮ್ಮ ತಾಯಿಗೆ ಮುಖ ತೋರಿಸಲು ನಾಚುವರು. ವಿದ್ಯೆ ಕಲಿತಲ್ಲದೆ ತಾಯಿಯ ಮುಖ ನೋಡೆವೆಂದು ಪಣತೊಟ್ಟು ಹೊರಡಲನುವಾಗುವರು. ಅಗ

ತಾಯಿ ಅವರನ್ನು ನಿಲ್ಲಿಸಿ "ಮಗಧ ದೇಶದ ರಾಜಗೃಹಪತಿ ಯಾದ ಸುಬಳ ಮಹಾರಾಜನ ಬಳಿ ಮಂತ್ರಿಯೂ, ನಿಮ್ಮ ಸೋದರಮಾವನೂ, ಸಕಲ ವಿದ್ಯಾಪಾರಂಗತನೂ ಆದ ಸೂರ್ಯ ಮಿತ್ರನಲ್ಲಿಗೆ ಹೋಗಿ ವಿದ್ಯೆ ಕಲಿತು ಬನ್ನಿ" ಎಂದಳು. ಜೊತೆಗೆ ಸೂರ್ಯಮಿತ್ರನಿಗೆ ಒಂದು ವಿನಯಪತ್ರವನ್ನೂ ಬರೆಸಿ ಕೊಟ್ಟಳು.

ಕೆಲವು ದಿವಸಗಳ ಪ್ರಯಾಣಾನಂತರ ಅವರು ರಾಜಗೃಹ ವನ್ನು ಪ್ರವೇಶಿಸಿ ಸೋದರಮಾವ ಸೂರ್ಯಮಿತ್ರನನ್ನು ಕಂಡು. ವಿಷಯ ತಿಳಿಸಿ ಪತ್ರ ಕೊಟ್ಟರು. ಓಲೆಯನ್ನು ಓದಿಕೊಂಡ ಸೂರ್ಯಮಿತ್ರ ತನ್ನ ಮೈದುನನ ಮರಣಕ್ಕಾಗಿ ಮನಸಲ್ಲಿಯೇ ಮರುಗಿದನು. ಈಗ ಸೋದರಳಿಯಂದಿರನ್ನು ಆದರಿಸಿ ಉಪ ಚರಿಸಿದರೆ ಪುನಃ ದಾರಿ ತಪ್ಪುವರೆಂದು ಭಾವಿಸಿ "ನನ್ನ ಹೆಸ ರೇನೋ ಲೋಕವಿಖ್ಯಾತವಾದ ಸೂರ್ಯಮಿತ್ರನೆಂದು ಇದೆ ಯಾದರೂ ಸೋಮಶರ್ಮನಿಗೂ ಕಾಶ್ಯಪಿಗೂ ನನಗೂ ಯಾವ ಸಂಬಂಧವೂ ಇಲ್ಲ. ವಿದ್ಯೆ ಕಲಿಯುವ ಇಚ್ಛೆ ನಿಮಗಿದ್ದರೆ ನಾನು ಕಲಿಸುವೆನು. ಊಟ ವಸತಿಗಳನ್ನು ನೀವೇ ನೋಡಿಕೊಳ್ಳಬೇಕು" ಎಂದು ತಿಳಿಸುವನು. ಇದನ್ನು ಕೇಳಿ ಸೋದರರು ವಿದ್ಯೆ ಕಲಿ ಯುವವರೆಗೂ ತಮ್ಮ ಜೀವರಕ್ಷಣೆಗೆ ಈ ನಗರದಲ್ಲಿ ಸುತ್ತಾಡಿ ವ್ಯವಸ್ಥೆ ಮಾಡಿಕೊಳ್ಳಲು ನಿಶ್ಚಯಿಸಿದವರಾಗಿ ಸೂರ್ಯಮಿತ್ರ ನಲ್ಲಿ ವಿದ್ಯಾಭ್ಯಾಸಕ್ಕೆ ತೊಡಗುವರು. ಕ್ರಮೇಣ ಅವರು ಸಕಲ ವಿದ್ಯಾ ಪಾರಂಗತರಾಗಿ ಗುರುವಿಗೆ ನಮಿಸಿ ಹೊರಡಲನುವಾಗು ವರು. ಆಗ ಸೂರ್ಯಮಿತ್ರ ತನ್ನ ಸಂಬಂಧವನ್ನು ತಿಳಿಸಿ ಇಂದಿನ ಆತ್ಮೀಯತೆ ಮುಂದೆಯೂ ಉಳಿಯಲೆಂದು ಸತ್ಕರಿಸಿ ಆಶೀ ರ್ವದಿಸಿ ಕಳುಹಿಸುವನು.

ಅಣ್ಣನಾದ ಅಗ್ನಿಭೂತಿ ಮೊದಲಿನಿಂದಲೂ ಋಜುಮಾರ್ಗದಲ್ಲಿ ಬೆಳೆದ ಕಾರಣ ಮಾವನ ಒಳ್ಳೆಯ ಗುಣವನ್ನು ಮೆಚ್ಚಿದನು. ತಮ್ಮನಾದ ವಾಯುಭೂತಿ ಗರ್ವಪಡುವವನಾದುದರಿಂದ ಗುರುವನ್ನು ಹೀಯಾಳಿಸಿದನು. ಅಣ್ಣ ತಮ್ಮಂದಿರು ಕೌಶಂಬಿಪುರವನ್ನು ತಲುಪಿ ತಾಯಿಗೆ ಸಂತೋಷವನ್ನು ಉಂಟುಮಾಡಿದರು. ದೊರೆಯನ್ನು ಕಂಡು ತಮ್ಮ ವಿದ್ಯಾಡಂಬರವನ್ನು ಮೆರೆದು ಕಳೆದುಹೋಗಿದ್ದ ಪದವಿಯನ್ನು ಪುನಃ ಪಡೆದರು.

ಇತ್ತ ರಾಜಗೃಹಾಧಿರಾಜನಾದ ಸುಬಳನು ಒಮ್ಮೆ ಸ್ನಾನ ಮಾಡುವಾಗ ತನ್ನ ಬೆರಳ ಉಂಗುರವನ್ನು ಸಮೀಪದಲ್ಲಿದ್ದ ಸೂರ್ಯಮಿತ್ರನಿಗೆ ಕೊಡುವನು. ಉಂಗುರವನ್ನು ತನ್ನ ಬೆರಳಲ್ಲಿಟ್ಟುಕೊಂಡ ಸೂರ್ಯಮಿತ್ರ ಮಾರನೆಯ ದಿವಸ ಕೊಳದಲ್ಲಿ ಮಿಂದು ಸೂರ್ಯನಿಗೆ ಅರ್ಘ್ಯವನ್ನು ಅರ್ಪಿಸುವಾಗ ಆ ಉಂಗುರ ಬೆರಳಿಂದ ಜಾರಿಬಿದ್ದುದನ್ನು ಗಮನಿಸದೆ ಮನೆಗೆ ಬರುವನು. ಬೆರಳಲ್ಲಿ ಉಂಗುರವಿಲ್ಲದುದನ್ನು ಕಂಡು, ಹೋದ ಬಂದ ದಾರಿಯಲ್ಲೆಲ್ಲಾ ಹುಡುಕಿ ಸಿಗದೆ ಇರಲು ವ್ಯಾಕುಲಗೊಂಡು ದೊರೆಯೊಡನೆ ಇದ್ದ ನಿಕಟ ಸ್ನೇಹಕ್ಕೆ ಧಕ್ಕೆ ಉಂಟಾಗಬಹುದೆಂದು ಚಿಂತಿಸಿ, ಜ್ಯೋತಿಷಿ ಪರಮಸ್ವಾಮಿಯನ್ನು ಬರಮಾಡಿಕೊಳ್ಳುವನು. ಅವನು ಬಳಪವನ್ನು ತೆಗೆದು ಏನನ್ನೋ ಬರೆಯುವಂತೆ ನಟಿಸಲು ಅವನ ಅಜ್ಞಾನವನ್ನು ತಿಳಿದು ಸೂರ್ಯಮಿತ್ರನು ಅವಮಾನಿಸದೆ ಸನ್ಮಾನಿಸಿ ಕಳುಹಿಸುವನು.

ಅನಂತರ ಚಿಂತಿಸುತ್ತ ಊರಹೊರಗಿನ ಉದ್ಯಾನವನಕ್ಕೆ ಬರಲು ದೂರದಲ್ಲಿ ಸುಧರ್ಮಾಚಾರ್ಯರೆನ್ನುವ ಜೈನ ದಿಗಂಬರ ಯತಿಗಳು ಕುಳಿತಿರುವುದನ್ನು ಕಂಡು "ಕೃತ್ತುಂ ಬತ್ತಲೆಯುಂ ಬೀದಿಕ್ಕೆಯು ನಾಚ್ಚದಿಯುಂಟೆಂದು" ಅವರನ್ನು ಸಮೀಪಿಸು

ಪನು. ಆ ಮುನಿ ಸೂರ್ಯಮಿತ್ರನನ್ನು ನೋಡಿ 'ಈ ಬ್ರಾಹ್ಮಣನು ಕರ್ಮಫಲ ಕಳೆದು ಜಿನಶಾಸನ ಪ್ರದೀಪನಕ್ಕು'ವೆಂದು ದಿವ್ಯಾವಧಿ ಜ್ಞಾನದಿಂದ ತಿಳಿದು ತನಗೆ ನಮಸ್ಕರಿಸಿ ನಿಂತ ಸೂರ್ಯಮಿತ್ರನಿಗೆ "ಸುಬಳನಾಥನ ಕೈಯ ಬೆರಳಿನ ಉಂಗುರವನ್ನು ಅತ್ತ ಬಿಸುಟು ಇತ್ತ ಏಕೆ ಬಂದಿರಿ?" ಎಂದರು. ಅವರು ಇಷ್ಟು ಖಚಿತವಾಗಿ ತನ್ನ ಮನಸ್ಸಿನ ವಿಚಾರವನ್ನು ತಿಳಿಸಿದುದನ್ನು ಕೇಳಿ ಸೂರ್ಯಮಿತ್ರನು ಅಚ್ಚರಿಗೊಳ್ಳುವನು. ಯತಿಯನ್ನು ಕುರಿತು "ಉಂಗುರವನ್ನು ನಾನೆಲ್ಲಿ ಕೆಡವಿದೆ? ಅದೀಗ ಯಾರ ಬಳಿ ಇದೆ? ಹೇಗೆ ಹುಡುಕಿದರೆ ಅದನ್ನು ಪಡೆಯಲು ಸಾಧ್ಯ? ದಯಮಾಡಿ ತಿಳಿಸಿ" ಎಂದು ಪ್ರಾರ್ಥಿಸುವನು.

ಸುಧರ್ಮಾಚಾರ್ಯರು "ನೀವು ಇಂದು ಸರೋವರದಲ್ಲಿ ಸೂರ್ಯನಿಗೆ ಅರ್ಘ್ಯವನ್ನು ಕೊಡುವಾಗ ಬೆರಳಿಂದ ಜಾರಿ ಕೊಳದ ತಾವರೆಯಲ್ಲಿ ಸಿಕ್ಕಿಕೊಂಡಿದೆ. ಬೆಳಗ್ಗೆ ಹೋಗಿ ನೋಡಿದರೆ ಉಂಗುರ ಸಿಗುತ್ತದೆ." ಎಂದು ತಿಳಿಸಿದರು. ಸೂರ್ಯಮಿತ್ರನು ಕೊಳದ ಸುತ್ತಲೂ ಆ ರಾತ್ರಿ ಭಟರನ್ನು ಕಾವಲಿಟ್ಟು ಬೆಳಗ್ಗೆ ಬಂದು ನೋಡಲಾಗಿ ಉಂಗುರ ದೊರಕಿತು. ಅದನ್ನು ಕೊಂಡೊಯ್ದು ಸುಬಳ ಮಹಾರಾಜನಿಗೆ ಕೊಟ್ಟು ಮನೆಗೆ ಬಂದು ತನ್ನ ಪತ್ನಿಗೆ ನಡೆದ ವಿಚಿತ್ರವನ್ನೆಲ್ಲಾ ವಿವರಿಸಿ "ಆ ಮುನಿಯ ಬಳಿಗೆ ಹೋಗಿ ಜ್ಯೋತಿಷ ಜ್ಞಾನವನ್ನು ಒಂದು ದಿನದಲ್ಲಿ ಕಲಿತು ಬರುವೆನು. ಆ ವಿದ್ಯೆ ನನಗೆ ದೊರೆತರೆ ತ್ರಿಲೋಕ ಸಾಮ್ರಾಜ್ಯವೇ ದೊರೆತಂತೆ" ಎಂದು ಹೇಳಿ ವೇಷ ಮರೆಸಿಕೊಂಡು ನಂದನವನಕ್ಕೆ ಬಂದನು. ಅದರೆ ಸುಧರ್ಮಾಚಾರ್ಯರು ಅಲ್ಲಿಂದ ತೆರಳಿದ್ದರು.

ಸೂರ್ಯಮಿತ್ರ ಅವರನ್ನು ಹುಡುಕಿಕೊಂಡು ಹೋಗಿ "ನನಗೆ ದಂಪತಿ ಮಕ್ಕಳ ಕುಟುಂಬ ದೊಡ್ಡದು. ದಯಮಾಡಿ ನಿಮಗೆ

ತಿಳಿದಿರುವ ಜ್ಯೋತಿಷವನ್ನು ನನಗೂ ಕಲಿಸಿಕೊಡಿ" ಎಂದು ನಾನಾ ವಿಧವಾದ ಮಿಥ್ಯಾ ವಿನಯದಿಂದ ಪ್ರಾರ್ಥಿಸಿದನು. ಆದರೆ ಇವನ ಮನಸ್ಸನ್ನು ಅರಿತ ಮುನಿ "ಈ ವಿದ್ಯೆ ನಿರ್ಗ್ರಂಥ ಋಷಿರೂಪರ್ಗಲ್ಲದೆ ಬೇರೆಯವರಿಗೆ ಬರದು" ಎಂದನು. ಸೂರ್ಯಮಿತ್ರನಿಗೆ ವೈದಿಕಧರ್ಮ ಬಿಟ್ಟು ಜೈನಧರ್ಮಕ್ಕೆ ಶರಣಾಗಲು ಮನಸ್ಸೊಪ್ಪದಿದ್ದರೂ ವಿದ್ಯೆ ಕಲಿಯುವ ಆಕಾಂಕ್ಷೆಯಿಂದ ನೆಪಮಾತ್ರವಾಗಿ ಕಪಟ ದೀಕ್ಷೆ ವಹಿಸಲು ನಿರ್ಧರಿಸಿದನು. ಮಾಯಾವಿಕೃತಿಯಿಂದ ದೀಕ್ಷೆ ಹೊಂದಿ "ಜೋಯಿಸ ವಿದ್ಯೆಯನ್ನು ತಿಳಿಸಿ" ಎಂದು ಬೇಡುವನು. ಸುಧರ್ಮಾಚಾರ್ಯರು "ಜೈನಾಗಮವನ್ನು ಕಲಿತಲ್ಲದೆ ಆ ಜ್ಞಾನ ಸಿಗದು" ಎಂದು ಹೇಳಲು ಸೂರ್ಯಮಿತ್ರನು ಜೈನಧರ್ಮಗ್ರಂಥಗಳನ್ನೆಲ್ಲಾ ಓದಿದನು. ಅದರಿಂದ ಅವನಲ್ಲಿ ಮೂಡಿದ್ದ ಕಪಟತ್ವ ಮಾಯವಾಗಿ ವಿಶುದ್ಧ ಪರಿಣಾಮಮನನಾಗಿ ಪುನರ್‌ದೀಕ್ಷೆ ಪಡೆದು ಮುನಿಗಳ ಪಾದಸೇವೆ ಮಾಡುತ್ತಾ ಅವರ ಬಳಿಯೇ ನಿಲ್ಲುವನು. ಹೀಗಿರುವಾಗ ಆತನಿಗೆ ಅವಧಿಜ್ಞಾನ ಲಭಿಸಿತು. ಸುಧರ್ಮಾಚಾರ್ಯರೂ ಮುಂದೆ ಕೇವಲ ವಿಭೂತಿಯನ್ನು ಹೊಂದಿ ಪರಮ ಸುಖವನ್ನೈದಿದರು.

ಸೂರ್ಯಮಿತ್ರ ಮುನೀಂದ್ರರು ವಿಹರಿಸುತ್ತಾ ಕೌಶಂಬಿಪುರಕ್ಕೆ ಬಂದು ಪಾರಣೆಯ ದಿನ ಚರಿಗೆಗೆ ಹೋಗುತ್ತಾ ಅಗ್ನಿಭೂತಿಯ ಮನೆಗೆ ಬರುವರು. ಅವರ ಬರವಿನಿಂದ ಅಗ್ನಿಭೂತಿ ಸಂತಸಗೊಂಡು ಸತ್ಕರಿಸುವನು. ಅನಂತರ ಅಗ್ನಿಭೂತಿ "ನಿಮ್ಮ ಕಿರಿಯ ಶಿಷ್ಯ, ನನ್ನ ತಮ್ಮ ವಾಯುಭೂತಿಯನ್ನು ಆಶೀರ್ವದಿಸಿ" ಎಂದು ಪ್ರಾರ್ಥಿಸಿ ತಮ್ಮನ ಮನೆಗೆ ಕರೆದುಕೊಂಡು ಹೋಗುವನು. ವಿಪ್ರಸಭೆಗೆ ವ್ಯಾಖ್ಯಾನ ಮಾಡುತ್ತಿದ್ದ ವಾಯುಭೂತಿ ತನ್ನ ಸೋದರಮಾವನೂ, ಗುರುವೂ ಆದ ಸೂರ್ಯಮಿತ್ರನ ಬರವನ್ನು ಕಂಡೂ

ಕಾಣದಂತೆ ಗರ್ವದಿಂದಿರಲು ಅಗ್ನಿಗೆ ನಾಚಿಕೆಯಾಗಿ "ಇವರು ನಿನ್ನನ್ನು ಹರಸಲು ಬಂದಿರುವಾಗ ನೀನು ಹೀಗೆ ಉದಾಸೀನನಾಗಿರುವುದೇ?" ಎನ್ನುವನು. ಆಗ ವಾಯುಭೂತಿ ಸೂರ್ಯಮಿತ್ರ ಭಟ್ಟಾರಕನನ್ನು "ನಿಮ್ಮ ಮನೆಯಲ್ಲಿ ಮಹಿಮೆಯಿಂದ ಬಾತುಕೊಂಡು ಕಣ್ಣು ಕಾಣದಂತೆ ಇದ್ದ ನಿಮ್ಮನ್ನು "ನೀವಾರು? ನಿಮ್ಮನ್ನು ನಾವು ಅರಿಯೆವು" ಎಂದು ನಟಿಸಿ ಭಿಕ್ಷಾನ್ನವನ್ನು ಕೊಡಲು ಬಂದ ಸತಿಯನ್ನು ಹೆದರಿಸಿದ ಅಂದಿನ ಸೊಕ್ಕು ಎಲ್ಲಿ ಹೋಯಿತು? ನಿಮಗೂ ಭಿಕ್ಷೆ ಬೇಡುವ ಗತಿ ಬಂದಿತೇ?" ಎಂದು ಮುಂತಾಗಿ ಹೀಯಾಳಿಸಿ ತಿರಸ್ಕರಿಸುವನು.

ಕ್ಷಮೆಯೇ ರೂಪುಗೊಂಡಂತೆ ಒಸೆಯದೆ ಬೆಸೆಯದೆ ಸಮಾನಚಿತ್ತರಾಗಿದ್ದ ಸೂರ್ಯಮಿತ್ರ ಮುನಿಗಳು ಅಲ್ಲಿಂದ ಹೊರಡಲು ಅಗ್ನಿಭೂತಿ ಅವರನ್ನೇ ಹಿಂಬಾಲಿಸಿ "ನನ್ನಿಂದ ನಿಮಗೆ ಅಪಮಾನವಾದುದಕ್ಕೆ ಯಾವ ಪ್ರಾಯಶ್ಚಿತ್ತವಿದೆ? ದಯಮಾಡಿ ನನಗೂ ದೀಕ್ಷೆ ಕೊಡಿ" ಎಂದು ಬೇಡಲು ಅಗ್ನಿಭೂತಿ ಆಸನ್ನಭವ್ಯನೆಂಬುದನ್ನು ಅರಿತು ಶುಭ ಮುಹೂರ್ತದಲ್ಲಿ ದೀಕ್ಷೆಕೊಟ್ಟರು. ಅವರಿಬ್ಬರೂ ದೇಶಗಳನ್ನು ಸುತ್ತುತ್ತಾ ಅಂಗದೇಶದ ಚಂಪಾ ನಗರವನ್ನು ಪ್ರವೇಶಿಸಿ ನಾಗಮಂಟಪದಲ್ಲಿದ್ದರು. ಮಾರನೆಯ ದಿವಸ ಅಗ್ನಿಭೂತಿ ಚರಿಗೆಗಾಗಿ ಹೋಗುತ್ತಿರುವಾಗ ಮಾರ್ಗ ಮಧ್ಯದಲ್ಲಿ ಹಸಿವಿನಿಂದ ದುಃಖಿನಿಯಾಗಿರುವ ಹುಟ್ಟುಕುರುಡಿ ಮಾತಂಗಿಯನ್ನು ಕಾಣುವನು. ತಲೆಗೂದಲು ಜಡೆಗಟ್ಟಿ ಹೇನು ತುಂಬಿ ಮೈಯೆಲ್ಲ ಬಾತುಕೊಂಡು ಅಸಹ್ಯವಾಗಿರುವ, ದಾರಿಯಲ್ಲಿ ಬಿದ್ದಿದ್ದ ಮಾವಿನ ನೇರಳೆಹಣ್ಣುಗಳನ್ನು ಆರಿಸಿ ತಿನ್ನುತ್ತಿರುವ ಮಾತಂಗಿಯನ್ನು ಕಂಡು ಅಗ್ನಿಭೂತಿಯು ಮನಸ್ಸು ಕರಗಿ ಕರುಣೆಯಿಂದ ಆಕೆಯ ಮುಂದಕ್ಕೆ ಹಣ್ಣುಗಳನ್ನು ತಳ್ಳುವನು.

ಮಧ್ಯಾಹ್ನ ಕಳೆದು ಭಿಕ್ಷೆಗೆ ಹೊತ್ತು ಮೀರಿ ಹೋಗಿ ಹಿಂದಿರುಗಿ ಸೂರ್ಯಮಿತ್ರ ಮುನಿಗೆ ನಮಸ್ಕರಿಸಲು ಅವಧಿ ಜ್ಞಾನದಿಂದ ಇದೆಲ್ಲವನ್ನೂ ಅರಿತು ಅಗ್ನಿಭೂತಿಗೆ "ಹಿಂದೆ ನಿಮ್ಮ ತಮ್ಮನಾದ ವಾಯುಭೂತಿಯು ಮನೆಗೆ ನನ್ನನ್ನು ಕರೆದುಕೊಂಡು ಹೋದಾಗ ಅವನು ತಿರಸ್ಕರಿಸಿದುದರಿಂದ ನಿನಗೆ ನಿರ್ವೇಗ ಹುಟ್ಟಿ ಯತಿಯಾದೆ. ನಿನ್ನ ಪತ್ನಿ ಸೋಮದತ್ತೆ ವಾಯುಭೂತಿಯ ಬಳಿ ಹೋಗಿ 'ಸೋದರನಾದವನೂ. ಗುರುವೂ ಬರಲು ಅವರನ್ನು ಉಪಚರಿಸದಿದ್ದುದಕ್ಕೆ ನನ್ನ ಪತಿ ನಾಚಿ ನಿನ್ನನ್ನು ನಿಂದಿಸದೆ ತಾನೇ ಯತಿಯಾಗಿ ಹೋದನು. ಅವರಿಂದ ನಾನೂ ನನ್ನ ಮಕ್ಕಳೂ ನವೆಯುವ ಪಾಪದ ಫಲವನ್ನು ನೀನು ಊಟಮಾಡುವೆ' ಎಂದು ಮೂದಲಿಸಲು ವಾಯುಭೂತಿ ಕೋಪದಿಂದ 'ನಾಚಿಕೆಗೆಟ್ಟ ನಿನ್ನ ಪತಿಯನ್ನು ಕರೆದುಕೊಂಡು ಬಾ' ಎಂದು ಹೊರಕ್ಕೆ ದಬ್ಬಿದನು. ಅವಮಾನವನ್ನು ಸಹಿಸದೆ ಸೋಮದತ್ತೆ 'ನನ್ನನ್ನು ಒದ್ದ ನಿನ್ನ ಕಾಲನ್ನು ನಾನು ನನ್ನ ಮಕ್ಕಳು ತಿನ್ನುತ್ತೇವೆ' ಎಂದು ನುಡಿದು ಸ್ವಲ್ಪಕಾಲದ ಮೇಲೆ ಸತ್ತು ತಿರ್ಯಗ್ಗತಿಯೊಳಗೆ ಹುಟ್ಟಿದ್ದಾಳೆ.

"ವಾಯುಭೂತಿಯೂ ಪಾಪದ ಫಲದಿಂದ ಕುಷ್ಠರೋಗ ಪೀಡಿತನಾಗಿ ಬಡತನದಿಂದ ನವೆದು ಸತ್ತು. ದೊಂಬನ ಮನೆಯಲ್ಲಿ ಕತ್ತೆಯಾಗಿ ಹುಟ್ಟಿ ನೋವಿನಿಂದ ಸತ್ತು, ಮತ್ತೆ ಹೋತನಾಗಿ ಹುಟ್ಟಿ ಯಾತನೆಯನ್ನು ಅನುಭವಿಸಿ ಮಡಿದು, ಹಂದಿಯಾಗಿ ಹುಟ್ಟಿ ಅಲ್ಲಿಂದ ನಾಯಾಗಿ ಜನಿಸಿ ಈಗ ಚಂಪಾನಗರದ ಮಾದಿಗ ದಂಪತಿಗಳಿಗೆ ಕುರುಡಿಯಾಗಿ ಹುಟ್ಟಿದ್ದಾನೆ. ಅವಳು ನಿಮ್ಮ ತಮ್ಮನಾದ ವಾಯುಭೂತಿಯಾದುದರಿಂದ ಹೆಚ್ಚಿನ ದಯೆಯುಂಟಾಯಿತು. ಆ ಜೀವ ಭವ್ಯ ಜೀವ. ಈಗಲೇ ಹೋಗಿ ಪಂಚಾಣುವ್ರತಗಳನ್ನುಪದೇಶಿಸು. ಅವಳಿಗೆ ಈ ಜನ್ಮದಲ್ಲಿ ಇದೊಂದೇ ದಿವಸ ಆಯುಸ್ಸಿರುವುದು" ಎಂದು ತಿಳಿಸುವರು. ಆಗ ಅಗ್ನಿಭೂತಿ ಮಾತಂ

ಗಿಯು ಬಳಿಗೆ ಹೋಗಿ "ನಿನ್ನ ಭವಾಂತರಗಳನ್ನು ಸ್ಮರಿಸಿಕೊ. ಪಾಪ ಪುಣ್ಯಗಳ ಅರಿವು ಉಂಟಾಗುತ್ತದೆ" ಎಂದು ವಿವರವಾಗಿ ತಿಳಿಸಲು ಕಾಲಲಬ್ಧಿ ಕೂಡಿಬಂದುದರಿಂದ ಕುರುಡಿ ಮುನಿಗೆ ವಂದಿಸುವಳು. ಅಗ್ನಿಭೂತಿ ಅಣುವ್ರತವನ್ನು ಉಪದೇಶಿಸಿ ಹೋದನು.

ಇತ್ತ ಆ ಕುರುಡಿಗೆ ಗುಂಪುಗೂಡಿದ ಜನರ ಧ್ವನಿ ಕೇಳಿ ಇದೇನೆಂದು ತನ್ನ ಒಡನಾಡಿಗಳನ್ನು ಆಕೆ ಕೇಳಲು ಅವರು ಆ ಕುರುಡಿಗೆ "ಈ ಊರಿನ ರಾಜನಾದ ಚಂದ್ರವಾಹನನ ಪುರೋಹಿತ ನಾಗಶರ್ಮನೂ, ಅವನ ಪತ್ನಿ ತ್ರಿವೇದಿಯೂ ಮಕ್ಕಳನ್ನು ಪಡೆಯಲು ನಾಗರಿಗೆ ಪೂಜಿಸಲು ಹೋಗುತ್ತಿದ್ದಾರೆ" ಎಂದು ತಿಳಿಸಿದರು. ಅದನ್ನು ಕೇಳಿ ಆ ಕುರುಡಿ ಪಂಚಾಣುವ್ರತಗಳನ್ನು ಸ್ವೀಕರಿಸಿದ್ದಕ್ಕೆ ಅವರಿಗಾದರೂ ನಾನು ಮಗುವಾಗಿ ಹುಟ್ಟಬಾರದೇ? ಎಂದು ಬಯಸಿದಳು. ಆ ವೇಳೆಗೆ ಸರಿಯಾಗಿ ಹಾವು ಕಚ್ಚಿ ಸಾಯುವಳು. ಅವಳ ಜೀವ ತ್ರಿವೇದಿಯ ಗರ್ಭ ಪ್ರವೇಶಿಸಿ ನವಮಾಸ ತುಂಬಿ ಸುರೂಪಿಯಾದ ಹೆಣ್ಣುಮಗುವಾಗಿ ಹುಟ್ಟುವುದು. ನಾಗರ ವರದಿಂದ ಪಡೆದ ಆ ಮಗುವಿಗೆ ನಾಗಶ್ರೀ ಎಂದು ಹೆಸರಿಡುವರು.

ಸುರೂಪಿಯಾಗಿ ಬೆಳೆದ ನಾಗಶ್ರೀ ಒಂದು ದಿನ ನಾಗಸ್ಥಾನದ ನಾಗರಿಗೆ ಪೂಜಿಸುತ್ತಾಳೆ. ಸೂರ್ಯಮಿತ್ರ, ಅಗ್ನಿಭೂತಿಯರು ದೇಶ ಸುತ್ತುತ್ತಾ ಮತ್ತೆ ಇಲ್ಲಿಗೇ ಬರುವರು. ಮುನಿಗಳಿಗೆ ನಾಗಶ್ರೀ ನಮಸ್ಕರಿಸಿ ಜಾತಿಸ್ಮರೆಯಾಗುವಳು. ಸೂರ್ಯಮಿತ್ರ ಭಟಾರಕರು ಭವಾವಳಿಗಳನ್ನೆಲ್ಲಾ ಹೇಳಿ ನಾಗಶ್ರೀಗೆ ಅಣುವ್ರತಗಳನ್ನು ಉಪದೇಶಿಸಿ "ನಿಮ್ಮ ತಂದೆ ಈ ವ್ರತಗಳನ್ನು ಬಿಟ್ಟುಬಿಡು ಎಂದರೆ ನಮ್ಮ ಬಳಿಗೇ ಬಂದು ಬಿಡು" ಎಂದು ಹೇಳಲು

ನಾಗಶ್ರೀ ಮತ್ತೆ ನಮಸ್ಕರಿಸಿ ಮನೆಗೆ ಹೋಗುವಳು. ನಾಗಶರ್ಮನಿಗೆ ಈ ವಿಚಾರ ತಿಳಿದು ಮಗಳಿಗೆ "ನಮ್ಮ ಪವಿತ್ರ ಕುಲವನ್ನು ಬಿಟ್ಟು ಆ ಸವಣನಿಗೆ ನಮಸ್ಕರಿಸಿ ಅಣುವ್ರತಗಳನ್ನು ಸ್ವೀಕರಿಸಿ ಕುಲದ ಮಹಿಮೆಯನ್ನು ನೀರಿನಲ್ಲಿ ಅದ್ದುವುದೇ? ಆ ವ್ರತಗಳನ್ನು ಬಿಟ್ಟುಬಿಡು" ಎಂದು ಹೇಳುವನು. ನಾಗಶ್ರೀ "ನನ್ನನ್ನು ಎಷ್ಟು ನಿರ್ಬಂಧಪಡಿಸಿದರೂ ಆ ವ್ರತಗಳನ್ನು ಬಿಡಲಾರೆ. ಹಾಗೆ ಬಿಡಬೇಕಾದರೆ ಮುನಿಯ ಬಳಿಗೆ ಹೋಗಿ ಒಪ್ಪಿಸಿ ಬರೋಣ" ಎಂದು ತಿಳಿಸಿ ತಂದೆಯೊಡನೆ ಯತಿಯ ಹತ್ತಿರಕ್ಕೆ ಬರುತ್ತಿರಲು, ಮಾರ್ಗದಲ್ಲಿ ಒಬ್ಬನ ಕೈಯನ್ನು ಹಿಂದಕ್ಕೆ ಕಟ್ಟಿ ಗುಂಪುಕೂಡಿ ಕೂಗುತ್ತಾ ಕರೆದೊಯ್ಯುತ್ತಿರಲು ನಾಗಶ್ರೀ ಇದೇನೆಂದು ವಿಚಾರಿಸುವಳು.

ನಾಗಶರ್ಮನು ಹೀಗೆ ಹೇಳುವನು: "ಇವನು ಈ ಊರಿನ ಶ್ರೀಮಂತ ಸುದತ್ತನೆಂಬ ವರ್ತಕನ ಮಗ ನಯಸೇನ. ಅಕ್ಷಧೂರ್ತನೆಂಬುವನೊಡನೆ ಅಕ್ಷಕ್ರೀಡೆಯಾಡಿ ಲಕ್ಷ್ಯದ್ರವ್ಯವನ್ನು ಸೋತನು. ಅಕ್ಷಧೂರ್ತ ಹಣವನ್ನು ಕೊಟ್ಟಲ್ಲದೆ ಹೋಗದಿರೆಂದು ಹೇಳಲು, ನಯಸೇನ ಅವನನ್ನು ಕೊಂದನು. ಈಗ ದೊರೆಯಾಜ್ಞೆಯಂತೆ ನಯಸೇನನನ್ನು ಕೊಲ್ಲಲು ಕರೆದುಕೊಂಡು ಹೋಗುತ್ತಿದ್ದಾರೆ." ಇದನ್ನು ಕೇಳಿ ನಾಗಶ್ರೀ "ಮುನಿ ಇತ್ತ ಕೊಲ್ಲದ ವ್ರತವನ್ನು ನಾನು ಬಿಟ್ಟಿರುಗಿದರೆ ನಾನೂ ಪ್ರಾಣಿಗಳನ್ನು ಕೊಂದು ಹೀಗೆ ಮರಣವನ್ನು ಹೊಂದಬೇಕಾಗುವುದು" ಎನ್ನುವಳು. ನಾಗಶರ್ಮನು ಕೊಲ್ಲದ ವ್ರತ ಒಂದನ್ನು ಬಿಟ್ಟು ಉಳಿದುದನ್ನು ಕೊಟ್ಟುಬಿಡೆಂದು ಹೇಳಿ ಮುಂದೆ ಬರುತ್ತಿರಲು ಎದುರಿಗೆ ಮತ್ತೊಂದು ಗುಂಪು ಕಾಣಿಸಿತು.

ನಾಗಶ್ರೀಯ ಪ್ರಶ್ನೆಯಂತೆ ವಿವರ ತಿಳಿದು ತಂದೆ ಹೀಗೆ ಹೇಳುವನು: "ವಂಗದೇಶದ ದೊರೆ ವಜ್ರಾಯುಧನು ಇಲ್ಲಿ

ರಾಜ ಚಂದ್ರವಾಹನನ ಮೇಲೆ ದಂಡೆತ್ತಿಬರಲು ಚಂದ್ರವಾಹನ ಚತುರಂಗ ಸೇನೆಯನ್ನು ಅಟ್ಟಿದನು. ಆದರೆ ತಕ್ಷಕನೆಂಬ ಚಾರನು ಯುದ್ಧ ಮಾಡಲಾರದೆ ಹಿಂದಕ್ಕೆ ಬಂದು ತಮ್ಮ ಸೈನ್ಯ ಸೋತು ಹೋಯಿತೆಂದು ಸುಳ್ಳು ಹೇಳುವನು. ಅದನ್ನು ಕೇಳಿ ಚಂದ್ರವಾಹನನು ದುಃಖದಿಂದ ತಲೆತಗ್ಗಿಸುವನು. ಸ್ವಲ್ಪಹೊತ್ತಿನ ನಂತರ ಸೇನಾನಿ ಬಂದು ತಮಗೆ ಜಯದೊರೆತ ಸುದ್ದಿ ತಿಳಿಸಲು ದೊರೆ ಸಂತಸಗೊಂಡು 'ಮೊದಲು ಸುಳ್ಳಾಡಿ ಮನೋಭಂಗ ಉಂಟುಮಾಡಿದ ಈ ತಕ್ಷಕನ ತಲೆಯನ್ನು ತೆಗೆಯಿರಿ' ಎಂದು ಹೇಳಿದನು. ಈಗ ಅವನನ್ನು ಕೊಲ್ಲಲು ಕರೆದುಕೊಂಡು ಹೋಗುತ್ತಿದ್ದಾರೆ" ಇದನ್ನು ಕೇಳಿ ನಾಗಶ್ರೀ ಸುಳ್ಳು ಹೇಳದಿರುವಂತೆ ವ್ರತವನ್ನು ತಾನು ಸ್ವೀಕರಿಸಿರುವೆನೆನ್ನಲು ಅದನ್ನು ಉಳಿದು ಮಿಕ್ಕ ವ್ರತಗಳನ್ನು ಬಿಡುವಂತೆ ನಾಗಶರ್ಮ ತಿಳಿಸಿ ಮುಂದೆ ಬರುತ್ತಿರಲು ಒಬ್ಬನನ್ನು ಬಹಳವಾಗಿ ಹಿಂಸಿಸಿ ಕೊಲ್ಲುತ್ತಿರುವ ದೃಶ್ಯವನ್ನು ಕಾಣುವರು. ಹೀಗೇಕೆ ಎಂದು ಕೇಳಿದ ಮಗಳಿಗೆ ನಾಗಶರ್ಮನು ಅದರ ಕಥೆಯನ್ನು ತಿಳಿಸುವನು:

"ಸುಮಿತ್ರನೆಂಬ ವರ್ತಕನಿಗೆ ವಸುಕಾಂತೆ ಎಂಬ ಮಗಳು. ಅವಳಿಗೆ ಹಾವು ಕಡಿಯಲು ಸುಮಿತ್ರನು ಶ್ಮಶಾನಕ್ಕೆ ಕೊಂಡೊಯ್ದನು. ಅಲ್ಲಿ ಗರುಡನಾಭಿ ಎಂಬ ಗಾರುಡಿಗನು ಬಂದು ಅವಳಿಗೆ ಆಯುಸ್ಸು ಬರುವಂತೆ ಮಾಡುವೆನೆಂದೂ ಆದರೆ ಅವಳನ್ನು ತನಗೇ ವಿವಾಹ ಮಾಡಿಕೊಡಬೇಕೆಂದೂ ತಿಳಿಸಿದನು. ಸುಮಿತ್ರನು ಒಪ್ಪಿ ಆ ರಾತ್ರಿ ಶವದ ಕಾವಲಿಗೆ ನಾಲ್ವರು ಭಟರನ್ನು ನಿಯಮಿಸಿ ಒಬ್ಬೊಬ್ಬರಿಗೆ ಒಂದೊಂದು ಸಾವಿರ ಹೊನ್ನಿನಂತೆ ನಾಲ್ಕು ಕಟ್ಟುಗಳನ್ನು ಅವರ ಮಧ್ಯದಲ್ಲಿಟ್ಟನು. ಅವರಲ್ಲಿ ಒಬ್ಬನು ಮೂವರನ್ನು ವಂಚಿಸಿ ಒಂದು ಕಟ್ಟನ್ನು ಕದಿಯುವನು. ಬೆಳಗಾದ ಮೇಲೆ ಒಂದು ಕಟ್ಟು ಕಡಿಮೆ ಇರುವುದನ್ನು ತಿಳಿದು ಸುಮಿತ್ರನು

ಅವರನ್ನು ತಳವಾರನಿಗೆ ಒಪ್ಪಿಸಿ "ಇವರಲ್ಲಿ ಕಳ್ಳನನ್ನು ಪತ್ತೆಮಾಡದಿದ್ದರೆ ಕಳ್ಳನಿಗೆ ಆಗುವ ಶಿಕ್ಷೆ ನಿನಗೇ ಆಗುತ್ತದೆ" ಎಂದು ಹೇಳುವನು. ತಳವಾರನು ಹಲವು ರೀತಿಯಲ್ಲಿ ಪ್ರಯತ್ನಿಸಿ ಕಳ್ಳನನ್ನು ಕಂಡುಹಿಡಿಯಲಾರದೆ ದುಃಖಗೊಂಡಿರಲು ಅವನ ಮಗಳು ಸುಮತಿ "ಉಪಾಯದಿಂದ ನಿನಗೆ ಹಣವನ್ನು ತಂದುಕೊಡುವೆನು" ಎಂದು ತಂದೆಗೆ ತಿಳಿಸಿ ಕಳ್ಳರನ್ನು ಪ್ರತ್ಯೇಕವಾಗಿ ಬರಹೇಳಿ ಪ್ರೀತಿಸುವಂತೆ ನಟಿಸುವಳು. ಅನಂತರ ಎಲ್ಲರನ್ನೂ ಒಟ್ಟಿಗೆ ಕರೆಸಿ ಒಂದು ವಿಚಿತ್ರ ಕತೆ ಹೇಳುವಳು.

"ಪಾಟಲೀಪುತ್ರವೆಂಬ ಪಟ್ಟಣದಲ್ಲಿ ವಸುದತ್ತನೆಂಬ ವರ್ತಕನ ಮಗಳು ಸುಧಾಮೆ. ಅವಳು ನದಿಯಲ್ಲಿ ಸ್ನಾನಮಾಡುತ್ತಿರಲು ಮೊಸಳೆ ಹಿಡಿಯಿತು. ದೂರದಲ್ಲಿದ್ದ ತನ್ನ ಭಾವ ಧನದೇವನನ್ನು ಕರೆದಳು. ಅವನು ನಾದಿನಿಯೆಂಬ ಸಲಿಗೆಯಿಂದ "ನಿನ್ನ ಮದುವೆಯ ದಿವಸದ ಅಲಂಕಾರವನ್ನು ನನಗೆ ತೋರಿಸುವುದಾದರೆ ಮೊಸಳೆಯಿಂದ ಬಿಡಿಸುವೆನು" ಎಂದು ಹೇಳುವನು. ಸುಧಾಮೆ ಒಪ್ಪಲು ಅವನು ಬಿಡಿಸುವನು. ಕಾಲ ಕಳೆಯಿತು. ಸುಧಾಮೆಗೆ ಮದುವೆ ನಿಶ್ಚಯವಾಗಲು ಅವಳು ಅಲಂಕರಿಸಿಕೊಂಡು ರಾತ್ರಿಯಲ್ಲಿ ಭಾವನ ಮನೆಗೆ ಹೊರಟಳು. ದಾರಿಯಲ್ಲಿ ಬ್ರಹ್ಮರಾಕ್ಷಸನು ಅವಳನ್ನು ತಿನ್ನಲು ಬಂದ. ಸುಧಾಮೆ ತನ್ನ ವಿಷಯ ತಿಳಿಸಿ ಬೇಗನೆ ಬರುವೆನೆಂದು ಮುಂದೆ ಹೊರಟಳು. ಒಬ್ಬ ಕಳ್ಳ ಒಡವೆಗಳಿಗಾಗಿ ಅಡ್ಡಿಪಡಿಸಲು ಅವನಿಗೂ ಮಾತುಕೊಟ್ಟು ಮುಂದೆ ಹೋಗುವಳು. ಊರಿನ ತಳವಾರ ಅನುಮಾನದಿಂದ ಗದರಿಸಲು ಅವನಿಗೂ ತನ್ನ ವೃತ್ತಾಂತ ತಿಳಿಸಿ ಹೊರಟಳು. ಅವಳ ಹಿಂದೆ ರಾಕ್ಷಸ, ಕಳ್ಳ, ತಳವಾರ, ಮೂವರೂ ಮರೆಯಾಗಿ ಹಿಂಬಾಲಿಸುವರು.

ಸುಧಾಮೆ ನಡುರಾತ್ರಿಯಲ್ಲಿ ತನ್ನ ಮನೆಗೆ ಬಂದುದನ್ನು ನೋಡಿದ ಧನದೇವ ಉಪಾಯವಾಗಿ ಅವಳನ್ನು ಹಿಂದಕ್ಕೆ ಕಳಿಸುವನು. ತಳವಾರ, ಕಳ್ಳ, ಬ್ರಹ್ಮರಾಕ್ಷಸ ಮೂವರೂ ಅವಳನ್ನು ಮೆಚ್ಚಿ ಬಿಟ್ಟುಬಿಡುವರು. ಈ ನಾಲ್ವರಲ್ಲಿ ಯಾರು ಒಳ್ಳೆಯವರು ಹೇಳಿ ಎಂದು ಸುಮತಿ ನಾಲ್ಕು ಜನ ಭಟರನ್ನು ಕೇಳಲು ಒಬ್ಬೊಬ್ಬರೂ ತಮಗೆ ಮೆಚ್ಚಿಗೆಯಾದವನನ್ನು ತಿಳಿಸುವರು. ಅವರಲ್ಲಿ ಕಳ್ಳನು ಒಳ್ಳೆಯವನೆಂದವನೇ ಕಳ್ಳನೆಂದು ತಿಳಿದ ಸುಮತಿ ಎಲ್ಲರನ್ನೂ ಕಳುಹಿಸಿ ಕಳ್ಳನಾದ ಭಟನನ್ನು ಕರೆಸಿಕೊಂಡು ಪ್ರೀತಿಸುವಂತೆ ನಟಿಸಿ "ನನ್ನ ಬಳಿ ಸ್ವಲ್ಪ ಹಣವಿದೆ: ಅದನ್ನು ತೆಗೆದುಕೊಂಡು ಬೇರೆ ಊರಿಗೆ ಹೋಗೋಣ" ಎಂದು ಹೇಳಲು ಅದನ್ನು ನಂಬಿ ತನ್ನ ಬಳಿಯೂ ಸ್ವಲ್ಪಹಣವಿರುವುದಾಗಿ ಕದ್ದ ಕಟ್ಟನ್ನು ಅವಳ ಕೈಗೆ ಕೊಟ್ಟನು. ಸ್ವಲ್ಪಹೊತ್ತು ನಿದ್ರಿಸಿ ಹೊರಡಲು ನಿಶ್ಚಯಿಸಿ ಮಲಗುವರು. ಭಟನಿಗೆ ಚೆನ್ನಾಗಿ ನಿದ್ರೆ ಬರಲು ಸುಮತಿ ಎದ್ದುಹೋಗಿ ತನ್ನ ತಂದೆಗೆ ತಿಳಿಸುವಳು. ಭಟನನ್ನು ಹಿಡಿದು ದೊರೆಗೆ ಒಪ್ಪಿಸಲು ಹಿಂಸಿಸಿ ಕೊಲ್ಲಿರೆಂದು ಆಜ್ಞಾಪಿಸಿದನು. ಅದಕ್ಕೆ ಹೀಗೆ ಕೊಲ್ಲುತ್ತಿರುವರು" ಎಂದು ನಾಗಶರ್ಮ ಮಗಳಿಗೆ ತಿಳಿಸಿದನು. ನಾಗಶ್ರೀಯು "ಕದಿಯುವ ವ್ರತವನ್ನು ಬಿಟ್ಟುಬಿಡಲೇ?" ಎನ್ನಲು "ಆ ವ್ರತವಿರಲಿ. ಉಳಿದುದನ್ನು ಬಿಡುವೆಯಂತೆ ಬಾ" ಎಂದು ಹೇಳಿದನು.

ಹಾಗೆಯೇ ಅವರು ಮತ್ತೆ ಮುಂದೆ ಹೋಗುತ್ತಿರಲು ಒಬ್ಬ ಹೆಂಗಸಿನ ಕಿವಿ ಮೂಗನ್ನು ಕೊಯ್ದು ಅವಳ ಕೊರಳಿಗೆ ಗಂಡಿನ ತಲೆಯನ್ನು ಕಟ್ಟಿ ತಳವಾರನು ಕರೆದೊಯ್ಯುತ್ತಿದ್ದುದನ್ನು ಕಂಡು ಪ್ರಶ್ನಿಸಲು ನಾಗಶರ್ಮನು ವಿವರ ತಿಳಿದು ಹೇಳುವನು. "ಸೂರಸೇನನೆನ್ನುವ ವರ್ತಕನಿಗೆ ಸುಮಿತ್ರೆಯೆಂಬ ಹೆಂಡತಿ. ಮದಾಳಿ ಅವರ ಮಗಳು. ನಂದ, ಭದ್ರರೆಂಬುವರು ಸೋದರಳಿಯಂದಿರು.

ಒಮ್ಮೆ ನಂದನು ಸುವರ್ಣ ದ್ವೀಪಕ್ಕೆ ವ್ಯಾಪಾರಕ್ಕಾಗಿ ಹೊರಟು, "ಇನ್ನು ಹನ್ನೆರಡು ವರ್ಷಕ್ಕೆ ನಾನು ಬರದಿದ್ದರೆ ಭದ್ರನಿಗೆ ಮದಾಳಿಯನ್ನು ಕೊಟ್ಟು ಮದುವೆ ಮಾಡಬಹುದೆಂಬುದಾಗಿ ಹೇಳಿ ಹೋದನು. ಆ ಅವಧಿ ಕಳೆಯುತ್ತಿದ್ದಂತೆ ನಂದನು ಬರದಿರಲು ಮದಾಳಿಯನ್ನು ಭದ್ರನಿಗೆ ಧಾರೆಯೆರೆಯುವ ವೇಳೆಗೆ ನಂದನು ಬಂದನು. ಆಗ ನಂದನಿಗೆ ಬೆಳೆದ ಹೆಣ್ಣು ಬೇಡವೆಂದು ಭದ್ರನೂ, ತಮ್ಮನಿಗೆ ಕೊಡುತ್ತಿದ್ದ ಹೆಣ್ಣು ಬೇಡವೆಂದು ನಂದನೂ ಮದಾಳಿಯನ್ನು ನಿರಾಕರಿಸುವರು. ಮದಾಳಿ ಮದುವೆ ನಿಂತು ತವರು ಮನೆಯಲ್ಲಿ ಇರಲು ನಾಗಸೂರನೆಂಬುವನು ಮದಾಳಿಗೆ ವಶನಾಗಿ ಮರೆಯಾಟ ನಡೆಸುವನು. ಅವನನ್ನು ತಳವಾರನು ಹಿಡಿದು ತಲೆ ಕತ್ತರಿಸಿ ಅವಳ ಕೊರಳಲ್ಲಿ ಕಟ್ಟಿ ಕಿವಿ ಮೂಗನ್ನು ಕೊಯ್ದು ಕರೆದುಕೊಂಡು ಹೋಗುತ್ತಿದ್ದಾನೆ" ಎಂದು ನಾಗಶರ್ಮ ಹೇಳಲು ನಾಗಶ್ರೀ ಪರದಾರ ನಿವೃತ್ತಿ ವ್ರತವನ್ನು ಬಿಡಲಾರೆ ಎನ್ನುವಳು. ಹಾಗೇ ಆಗಲೆಂದು ನಾಗಶರ್ಮನು ಒಪ್ಪಿ ಮುಂದುವರಿಯುತ್ತಿರಲು ಶೂಲಕ್ಕೇರಿಸಿದ ಒಬ್ಬನು ನೋವು ತಡೆಯದೆ ಗೋಳಾಡುತ್ತಿರುವುದನ್ನು ಕಂಡು ಅದರ ವಿವರವನ್ನು ಮಗಳಿಗೆ ತಿಳಿಸುವನು.

"ಚಂದ್ರವಾಹನ ರಾಜನ ಪಶುಪಾಲಕನಾದ ವೀರಪೂರ್ಣನು ರಾಜರ ಹಟ್ಟಿಗೆ ಹಸುಗಳು ನುಗ್ಗಲು ಅವನ್ನು ಹಿಡಿದು ದೊರೆಗೆ ಒಪ್ಪಿಸಿದನು. ಅವನ ಭಕ್ತಿಗೆ ಮೆಚ್ಚಿದ ದೊರೆ ಹಸುಗಳನ್ನು ಅವನಿಗೇ ಕೊಟ್ಟುಬಿಡುವನು. ವೀರಪೂರ್ಣನಿಗೆ ಆಸೆ ಹೆಚ್ಚಿ ಊರಿನ ಗೋವುಗಳಲ್ಲದೆ, ಮಹಾರಾಣಿಯ ಗೋವುಗಳನ್ನೂ ಹಿಡಿಯಲು ಸತ್ಯಸಂಗತಿ ತಿಳಿದು ರಾಜನು ಇಂಥ ಶಿಕ್ಷೆಯನ್ನು ವಿಧಿಸಿದ್ದಾನೆ." ಆಗ ನಾಗಶ್ರೀ ಅತಿ ಆಸೆ ಪಡದಿರುವಂತೆ ವ್ರತವನ್ನು ಸ್ವೀಕರಿಸಿರುವೆನೆನ್ನಲು ನಾಗಶರ್ಮನು ಎಲ್ಲ ವ್ರತಗಳೂ ಇರಲಿ, ಆದರೆ ಆ

ಸವಣನನ್ನು ಶಿಕ್ಷಿಸಲೇ ಬೇಕೆಂದು ಹೇಳಿ ಸೂರ್ಯಮಿತ್ರಾಚಾರ್ಯರಲ್ಲಿಗೆ ಬಂದು "ಉಪಾಯದಿಂದ ನನ್ನ ಮಗಳಿಗೆ ವ್ರತಗಳನ್ನು ಕೊಡುವುದು ನ್ಯಾಯವೇ?" ಎಂದನು. ಆ ಯತಿ "ಈ ಮಗಳು ನಮ್ಮ ಮಗಳು" ಎನ್ನುವರು.

ನಾಗಶರ್ಮನು ದೊರೆಗೆ ಇದನ್ನು ತಿಳಿಸಲು ಅವನು ಆಶ್ಚರ್ಯದಿಂದ ಮುನಿಯ ಬಳಿಗೆ ಬಂದು ಕೇಳಲು "ನಮ್ಮ ಮಗಳಿಗೆ ಅವಳು ಇಚ್ಛಿಸಿದ ವ್ರತ ಕೊಟ್ಟೆವು" ಎನ್ನುವರು. ಅವಳು ಹೇಗೆ ನಿಮ್ಮ ಮಗಳು? ಎಂದು ಕೇಳಲು ನಾಗಶರ್ಮನಿಗೆ "ನಿಮ್ಮ ಮಗಳಾದರೆ ಶಾಸ್ತ್ರಾಗಮಗಳನ್ನು ಕಲಿಸಿರುವಿರಾ?" ಎಂದು ಪ್ರಶ್ನಿಸುವರು. ನಾಗಶರ್ಮ ಇಲ್ಲವೆನ್ನಲು "ಅವೆಲ್ಲವನ್ನೂ ಹೇಳಿಕೊಟ್ಟಿರುವುದರಿಂದ ಇವಳು ನಮ್ಮ ಮಗಳು" ಎಂದರು. ರಾಜನು "ನಿಮ್ಮ ಮಗಳ ವಿದ್ಯೆಯನ್ನು ಪ್ರದರ್ಶಿಸಿ ನಮ್ಮ ಸಂಶಯವನ್ನು ಹೋಗಲಾಡಿಸಿ" ಎನ್ನುವನು. ಆಗ ಭಟಾರರು ನಾಗಶ್ರೀಯ ತಲೆಯ ಮೇಲೆ ಕೈಯಿಟ್ಟು ವಾಯುಭೂತಿ ಜನ್ಮದಲ್ಲಿ ಉಪದೇಶಿಸಿದ ವಿದ್ಯೆಯನ್ನು ತೋರಿಸು ಎನ್ನಲು ಎಲ್ಲರೂ ಆಶ್ಚರ್ಯ ಹೊಂದುವಂತೆ ನಾಗಶ್ರೀ ವಿದ್ಯೆ ಮೆರೆಯುವಳು. ಇದನ್ನು ನೋಡಿದ ಚಂದ್ರವಾಹನ ರಾಜ, ನಾಗಶರ್ಮ, ನಾಗಶ್ರೀ, ತ್ರಿವೇದಿ ಎಲ್ಲರೂ ದೀಕ್ಷೆ ಹೊಂದುವರು. ಕೆಲವು ದಿನಗಳಲ್ಲಿ ಸೂರ್ಯಮಿತ್ರಾಚಾರ್ಯರಿಗೆ ಮನಃಪರ್ಯಯ ಹುಟ್ಟಿ, ಅವರು ಮೋಕ್ಷಕ್ಕೆ ಹೋಗುವರು. ಅಗ್ನಿಭೂತಿಯೂ ಕರ್ಮಗಳನ್ನು ನೀಗಿಕೊಂಡು ಮುಕ್ತಿ ಪಡೆಯುವನು. ನಾಗಶ್ರೀ ತಪಸ್ಸು ಮಾಡಿ ಅಚ್ಯುತ ಕಲ್ಪದಲ್ಲಿ ಪದ್ಮಪ್ರಭನೆಂಬ ದೇವನಾಗಿ ಹುಟ್ಟಿ ಸಕಲ ಸುಖವನ್ನೂ ಅನುಭವಿಸುವನು.

ಅವಂತಿಯೆಂಬ ದೇಶದ ಉಜ್ಜೇನಿಯ ದೊರೆ ವೃಷಭಾಂಕನ ಪ್ರಧಾನ ಶ್ರೇಷ್ಠಿ ಇಂದ್ರದತ್ತ. ಇಂದ್ರದತ್ತನ ಮಗ ಸೂರದತ್ತ.

ಸೂರದತ್ತನ ಮಡದಿ ಯಶೋಭದ್ರೆ. ಇವರಿಗೆ ಅಪಾರ ಸಂಪತ್ತಿದ್ದರೂ ಮಕ್ಕಳಿಲ್ಲದ ಚಿಂತೆ ಕಾಡುತ್ತಿತ್ತು. ಯಶೋಭದ್ರೆ ಹೀಗೆ ಚಿಂತಿಸುತ್ತಿರಲು ಒಮ್ಮೆ ಆ ಪಟ್ಟಣಕ್ಕೆ ಆಗಮಿಸಿದ್ದ ಅಭಿನಂದನ ಮುನೀಂದ್ರರನ್ನು ಕಂಡು ವಂದಿಸಿ "ನನಗೆ ಮಕ್ಕಳ ಭಾಗ್ಯವಿದೆಯೇ?" ಎಂದು ಕೇಳುವಳು. ಮುನಿಗಳು "ನಿಮಗೆ ಗರ್ಭಸುಖಿಯಾದ ಮಗನು ಹುಟ್ಟುವನು. ಆದರೆ ಮಗನ ಮುಖ ನೋಡಿದ ಮೇಲೆ ತಂದೆ ತಪಸ್ಸಿಗೆ ಹೋಗುವನು. ಆ ಮಗುವಿಗೂ ಯತಿ ದರ್ಶನವಾದ ಕೂಡಲೆ ಅವನೂ ಯತಿಯಾಗುವನು" ಎಂದು ತಿಳಿಸುವರು. ಇದನ್ನು ಕೇಳಿದ ಯಶೋಭದ್ರೆಗೆ ದುಃಖ ಸಂತೋಷಗಳು ಒಮ್ಮೆಲೇ ಬಂದುವು.

ಅತ್ತ ಸ್ವರ್ಗದಲ್ಲಿದ್ದ ಪದ್ಮಪ್ರಭನು ತನ್ನ ವಿರಾಮಕಾಲ ಸಮೀಪಿಸಲು ಅಲ್ಲಿಂದ ಚ್ಯುತನಾಗಿ ಯಶೋಭದ್ರೆಯ ಗರ್ಭವನ್ನು ಪ್ರವೇಶಿಸಿದ. ಅವಳಿಗೆ ನವಮಾಸ ತುಂಬಲು ಗಂಡುಮಗನನ್ನು ಹಡೆಯುವಳು. ಸೂರದತ್ತ ಮಗನನ್ನು ನೋಡಿ ತನ್ನ ಕರ್ತವ್ಯ ತೀರಿತೆಂದು ತಪಸ್ಸಿಗೆ ಹೋದನು. ಯಶೋಭದ್ರೆ ಮಗನ ಮೇಲಿನ ಮೋಹದಿಂದ ಮನೆಯಲ್ಲೇ ನಿಂತು ಮಗನಿಗೆ ಸುಕುಮಾರನೆಂದು ಹೆಸರಿಟ್ಟು ಬೆಳೆಸುವಳು. ನವರತ್ನ ಖಚಿತವಾದ ಅರಮನೆಯನ್ನು ಕಟ್ಟಿಸಿ ಅದರ ಸುತ್ತಲೂ ಮುವ್ವತ್ತೆರಡು ಅರಮನೆಗಳನ್ನು ಕಟ್ಟಿಸಿದಳು. ಮಗನಿಗೆ ಯತಿಯ ರೂಪ ಕಾಣದಂತೆ ಮಾಡಿದಳು. ಮಗ ಪ್ರಾಪ್ತವಯಸ್ಕನಾಗಲು ಸುಂದರಿಯರಾದ 32 ಕನ್ಯೆಯರನ್ನು ತಂದು ವಿವಾಹ ನೆರವೇರಿಸಿದಳು.

ಹೀಗಿರಲು ಒಮ್ಮೆ ರಾಜನ ಆಸ್ಥಾನಕ್ಕೆ ಬಂದ ರಘುಂರಘಾವೇಗನೆಂಬುವನು ಅಪೂರ್ವ ರತ್ನಕಂಬಳಿಯನ್ನು ತೋರಿಸಲು ರಾಜನು ಅದರ ಬೆಲೆಯನ್ನು ಕೊಟ್ಟು ಕೊಳ್ಳಲು ತನಗೆ ಸಾಧ್ಯವಿಲ್ಲವೆಂದು ಸತ್ಕ

ರಿಸಿ ಕಳುಹಿಸುವನು. ಅವನು ಇಷ್ಟು ಬೆಲೆಬಾಳುವ ಕಂಬಳಿಯನ್ನು ಕೊಳ್ಳುವ ಶ್ರೀಮಂತರು ನಗರದಲ್ಲಿ ಯಾರಿದ್ದಾರೆಂದು ವಿಚಾರಿಸಲು ಸುಕುಮಾರಸ್ವಾಮಿಯಲ್ಲದೆ ಬೇರೆ ಯಾರೂ ಇಲ್ಲವೆಂದು ಹೇಳುವರು. ವರ್ತಕನು ಅವರ ಮನೆಗೆ ಬಂದು ಕಂಬಳಿಯನ್ನು ತೋರಿಸಲು ಯಶೋಭದ್ರೆ ಅದಕ್ಕೆ ಬೆಲೆಕಟ್ಟಿಸಿ ಕೋಟಿ ಹೊನ್ನನ್ನು ಕವಡೆ ಕೊಡುವಂತೆ ಕೊಟ್ಟು ಕೊಂಡುಕೊಂಡು ಮಗನಿಗೆ ಕಳುಹಿಸುವಳು. ಸುಕುಮಾರನು ಅದನ್ನು ತಾನು ಹೊದೆದರೆ ಸಿಕಿಯಾಗುವುದೆಂದೂ ಮೆಚ್ಚುಗೆಯಾದ ಸೊಸೆಗೆ ಕೊಡಬೇಕೆಂದೂ ತಾಯಿಗೆ ಹೇಳಿಕಳುಹಿಸುವನು. ಆಗ ಯಶೋಭದ್ರೆ ಒಬ್ಬ ಸೊಸೆಗೆ ಕೊಟ್ಟರೆ ಪಕ್ಷಪಾತವಾಗುವುದೆಂದು ಅದನ್ನು ಕತ್ತರಿಸಿ ಎಲ್ಲ ಸೊಸೆಯರಿಗೂ ಪಾದುಕೆಗಳಾಗಿ ಹೊಲಿಸಿ ಕೊಡುವಳು.

ಇತ್ತ ತನ್ನ ಒಡ್ಡೋಲಗದಲ್ಲಿ ರಾಜ ವೃಷಭಾಂಕನು "ರತ್ನಂ ರತ್ನಾವೇಗನು ತಂದಿದ್ದ ರತ್ನಕಂಬಳಿಯನ್ನು ಯಾರೂ ಕೊಳ್ಳಲಾರರಲ್ಲವೇ?" ಎಂದು ಸಭೆಯಲ್ಲಿ ಕೇಳಿದನು. "ಸುಕುಮಾರನ ತಾಯಿ ಅದನ್ನು ಕೊಂಡು ಸೊಸೆಯರಿಗೆ ಪಾದುಕೆಗಳಾಗಿ ಮಾಡಿಸಿ ಕೊಟ್ಟಳು" ಎಂದು ಸಭೆಯವರು ತಿಳಿಸಿದರು. ವೃಷಭಾಂಕನು "ನಾವು ಕೊಳ್ಳಲಾರದ ವಸ್ತುವನ್ನು ಕೊಂಡ ಅವರ ಮಹಿಮೆ ಎಷ್ಟೋ! ಹಾಗಾದರೆ ಸುಕುಮಾರನ ಮಹಿಮೆಯನ್ನೂ, ವಿಭೂತಿಯನ್ನೂ ನೋಡಬೇಕು." ಎಂದು ನಿರ್ಧರಿಸಿ ಸುಕುಮಾರನ ಮನೆಗೆ ಪರಿವಾರ ಸಮೇತ ಬರುವನು. ಯಶೋಭದ್ರೆ ಅವರನ್ನು ಸ್ವಾಗತಿಸಿ ಉಪಚರಿಸಿದಳು. ರಾಜನು "ನಮ್ಮ ತಮ್ಮನೆಲ್ಲಿ? ಅವನನ್ನು ನೋಡಲು ಬಂದೆವು" ಎನ್ನುವನು. ಯಶೋಭದ್ರೆ ಮಗನನ್ನು ಕರೆಸುವಳು. ಮನ್ಮಥಾಕಾರನಾದ ಸುಕುಮಾರನನ್ನು ವೃಷಭಾಂಕನು ಅಪ್ಪಿಕೊಳ್ಳುವನು.

ಅನಂತರ ಯಶೋಭದ್ರೆ ರಾಜನನ್ನೂ, ರಾಜಪರಿವಾರವನ್ನೂ ಊಟೋಪಚಾರಗಳಿಂದ ಸತ್ಕರಿಸುವಳು. ವೃಷಭಾಂಕನು ಹೊರಡುವಾಗ "ನಿಮ್ಮ ಮಗ ಪೀಠದ ಮೇಲೆ ಸರಿಯಾಗಿ ಕುಳಿತುಕೊಳ್ಳಲಾರ. ಊಟದಲ್ಲಿ ಒಂದು ಅಗುಳನ್ನು ಉಗಿದು ಮತ್ತೊಂದನ್ನು ಕಷ್ಟದಿಂದ ನುಂಗುವನು. ಕಣ್ಣು ತುಂಬ ನೀರು ತುಂಬುತ್ತದೆ. ಬೆಚ್ಚುತ್ತಿರುತ್ತಾನೆ. ವೈದ್ಯರಿಗೆ ತೋರಿಸಿ ಔಷಧ ಕೊಡಿಸಿ" ಎನ್ನುವನು. ಅದಕ್ಕೆ ಯಶೋಭದ್ರೆ ಹೀಗೆ ಉತ್ತರಿಸುವಳು: "ನಮ್ಮ ಕುಮಾರ ಹುಟ್ಟಿದಂದಿನಿಂದ ಸ್ವಾಮಿ-ಸೇವಕ, ಹಗಲು-ಇರುಳು ಎಂಬ ಭೇದವನ್ನೂ, ಚಾಮರದ ಗಾಳಿಯಲ್ಲದೆ ಬೇರೆ ಗಾಳಿಯನ್ನೂ ತಿಳಿಯನು. ನೀವು ಬಂದದ್ದರಿಂದ ಮಣಿ ಮಾಡವನ್ನು ಬಿಟ್ಟು ಕೆಳಕ್ಕೆ ಬಂದಿದ್ದಾನೆ. ಪೀಠದ ಮೇಲೆ ಬಿದ್ದ ಸೇಸೆಯಕಾಳು ಒತ್ತಿ ಸರಿಯಾಗಿ ಕುಳಿತುಕೊಳ್ಳಲಾರ. ರತ್ನದೀಪದ ಬೆಳಕನ್ನು ಮಾತ್ರ ನೋಡಿದ ಅವನಿಗೆ ತಮ್ಮ ಆಗಮನದ ಸಂತೋಷಕ್ಕಾಗಿ ಎತ್ತಿದ ಮಂಗಳಾರತಿಯ ಬೆಳಕು ಕಣ್ಣೀರು ಬರಿಸಿದೆ. ಚಂದ್ರಕಾಂತ ಶಿಲೆಯ ನೀರು, ಕಬ್ಬಿನ ರಸ, ಎಳನೀರುಗಳಿಂದ ಬೆಳೆದ ತಾವರೆಹೂವಿನ ಜೊತೆಯಲ್ಲಿ ಹಿಂದಿನ ದಿವಸವೇ ಕುಟ್ಟಿಮಾಡಿದ ಅಕ್ಕಿಯ ಅನ್ನವನ್ನು ತಿಂದು ಅಭ್ಯಾಸ. ಈ ದಿವಸ ಸ್ವಲ್ಪ ಬೇರೆ ಅಕ್ಕಿಯನ್ನು ಬೆರಸಲು ಪುಷ್ಪವಾಸನೆ ಇದ್ದುದನ್ನು ನುಂಗುತ್ತಾ ಬೇರೆಯದನ್ನು ಉಗುಳುತ್ತಿದ್ದನು. ಬಹಳ ಜನಸಂದಣಿಯಿಂದ ಒಮ್ಮೊಮ್ಮೆ ಬೆಚ್ಚುವನು." ಇದನ್ನು ಕೇಳಿ ಸುಕುಮಾರನ ಹೆಸರಿಗೆ ತಕ್ಕ ವಿಭೂತಿಗೆ ಮೆಚ್ಚಿ "ಅವಂತೀ ಸುಕುಮಾರ" ಎಂಬ ಹೆಸರನ್ನು ಕೊಟ್ಟು ವೃಷಭಾಂಕನು ಸಂತಸದಿಂದ ತೆರಳುವನು.

ಹೀಗೆ ಕಾಲ ಕಳೆಯಲು ಒಮ್ಮೆ ಯಶೋಭದ್ರಸ್ವಾಮಿಗಳೆಂಬುವರು. ಸಮೀಪದ ಉದ್ಯಾನವನದಲ್ಲಿ ನಿಲ್ಲಲು, ಯಶೋಭದ್ರೆ ನಮಸ್ಕರಿಸಿ "ಭಟಾರ ನೀವು ಇಲ್ಲಿರಬೇಡಿ" ಎಂದು ಪ್ರಾರ್ಥಿಸು

ವಳು. ಚಾತುರ್ಮಾಸದ ಯೋಗದಲ್ಲಿದ್ದ ಮುನಿ ಆ ಸ್ಥಳಬಿಟ್ಟು ಕದಲಲು ಆಗದೆನ್ನುವರು. "ಈ ನಾಲ್ಕು ತಿಂಗಳೂ ಮೌನವಾಗಿ ನಿಮ್ಮ ಯೋಗವನ್ನು ನಡೆಸಿ" ಎಂದು ಯಾಚಿಸಿ ಹಿಂತಿರುಗುವಳು. ನಾಲ್ಕು ತಿಂಗಳ ವ್ರತ ಮುಗಿಯಲು ಮುನಿ ಮೌನ ಮುರಿದು ಬೆಳಗಿನ ಜಾವದಲ್ಲಿ ಧರ್ಮೋನ್ನತಿಯನ್ನು ಕುರಿತು ಹಾಡುವರು. ನಿದ್ರೆಯಲ್ಲಿದ್ದ ಸುಕುಮಾರ ಈ ಧ್ವನಿಯನ್ನು ಕೇಳಿ ಜಾತಿಸ್ಮರ ನಾಗುವನು. ವೈರಾಗ್ಯ ಉದಿಸಿ ದಿವ್ಯವಸ್ತ್ರಗಳನ್ನು ಒಂದಕ್ಕೊಂದು ಗಂಟುಹಾಕಿ ಕಂಬಕ್ಕೆ ಕಟ್ಟಿ ಉಪ್ಪರಿಗೆಯಿಂದಿಳಿದು ಮುನಿಗಳಲ್ಲಿ ದೀಕ್ಷೆ ಬೇಡುವನು. "ನಿನಗೆ ಇನ್ನು ಮೂರು ದಿವಸ ಮಾತ್ರ ಆಯುಸ್ಸಿದೆ. ನಿನ್ನ ಉದ್ಧಾರ ಮಾರ್ಗವನ್ನು ನೋಡು" ಎಂದು ದೀಕ್ಷೆ ಇತ್ತರು. ತನ್ನ ಐಶ್ವರ್ಯವನ್ನು ಬಿಸುಟು ಧರ್ಮಬೋಧೆ ಯನ್ನು ಕೇಳಿ ಬೆಳಕು ಹರಿಯಲು ಅಲ್ಲಿಂದ ಹೊರಡುವನು.

ಸುಕುಮಾರನಿಗೆ ನೆಲದಲ್ಲಿ ನಡೆದು ಅಭ್ಯಾಸವಿಲ್ಲವಾದುದರಿಂದ ಕಾಲುಗಳಿಂದ ರಕ್ತ ಸೋರುವುದು. ಮುಂದೆ ಒಂದು ಕಡೆ ಕುಳಿತು ತಪಸ್ಸಿಗೆ ತೊಡಗುವನು. ಅದನ ವಾಯುಭೂತಿಯ ಜನ್ಮದಲ್ಲಿ ಅತ್ತಿಗೆಯಾಗಿದ್ದ ಸೋಮದತ್ತೆಯೂ, ಅವಳ ಇಬ್ಬರು ಮಕ್ಕಳೂ ಹೆಣ್ಣುನರಿಗಳಾಗಿ ಹುಟ್ಟಿ ಆಹಾರ ಹುಡುಕುತ್ತಾ ಸುಕುಮಾರನ ಕಾಲಿನಿಂದ ಸುರಿದ ರಕ್ತದ ಗುರುತನ್ನೇ ಹಿಡಿದು ಬಂದು ತಪಸ್ಸಿಗೆ ಕುಳಿತಿದ್ದವನನ್ನು ಶವವೆಂದು ತಿಳಿದು, ಅವನ ಕಾಲುಗಳನ್ನು ತಿನ್ನು ವರು. ಜೀವ-ಶರೀರಗಳು ಬೇರೆ ಎಂಬುದನ್ನು ತಿಳಿದ ಸುಕುಮಾರ ನಿಗೆ ದೇಹದ ನೋವು ಆಗಲಿಲ್ಲ. ತಿರಿಕೋಪಸರ್ಗವನ್ನು ಸಹಿಸಿ ಸತ್ತು, ಮೋಕ್ಷದ ನೆರೆಮನೆಯಾದ ಸರ್ವಾರ್ಥಸಿದ್ಧಿಯಲ್ಲಿ ಅಹ ಮಿಂದ್ರನಾಗಿ ಹುಟ್ಟಿದನು. ಇತ್ತ ಸುಕುಮಾರನನ್ನು ಎಲ್ಲಿಯೂ ಕಾಣದೆ ಯಶೋಭದ್ರೆಯೂ, ಸೊಸೆಯರೂ ಹುಡುಕುತ್ತಾ

ಬಂದು ವಿಗತಜೀವಿಯಾದ ಸುಕುಮಾರನನ್ನು ನೋಡುವರು. ಆಗ ಮುವ್ವತ್ತೆರಡು ಜನ ಸೊಸೆಯರಲ್ಲಿ ಗರ್ಭಿಣಿಯರನ್ನು ಬಿಟ್ಟು ಉಳಿದವರೊಡನೆ ಯಶೋಭದ್ರೆ ನಿರ್ವೇಗ ಹೊಂದಿ ದೀಕ್ಷೆ ಪಡೆಯುವಳು.

ವಿಮರ್ಶೆ

ಸುಕುಮಾರಸ್ವಾಮಿಯ ಕತೆ ಕನ್ನಡ ಕಥಾ ಸಾಹಿತ್ಯದಲ್ಲಷ್ಟೇ ಅಲ್ಲ, ಭಾರತೀಯ ಕಥಾ ಸಾಹಿತ್ಯದಲ್ಲೇ ಉತ್ಕೃಷ್ಟ ಕಥಾರತ್ನ. ಜೈನ ಕಥಾ ಸಾಹಿತ್ಯದಲ್ಲಂತೂ ಇದು ಅತ್ಯಂತ ಜನಪ್ರಿಯವಾದ ಕತೆ. ವಿಶ್ವದ ಶ್ರೇಷ್ಠ ಕತೆಗಳ ಸಾಲಿಗೆ ಸೇರುವ ಇಂಥ ಉದಾತ್ತ ಕತೆಯೊಂದನ್ನು ಆರಿಸಿಕೊಂಡು ಸುಮಾರು ಒಂದು ಸಾವಿರ ಪದ್ಯಗಳ ಚಂಪೂ ಕಾವ್ಯವನ್ನು ಬರೆಯುವುದರ ಮೂಲಕ ಶಾಂತಿನಾಥ ಕವಿ ತನ್ನ ಮೇಲ್ಮಟ್ಟದ ಜಾಣ್ಮೆಯನ್ನು ತೋರಿಸಿದ್ದಾನೆ. ಏಕೆಂದರೆ ಜೈನನಾದ ಶಾಂತಿನಾಥನಿಗೆ ಜಿನಧರ್ಮದ ಮಹತ್ವವನ್ನು ಚಿತ್ರಿಸಿ ಅದರ ಔನ್ನತ್ಯವನ್ನು ಲೋಕಕ್ಕೆ ಸಾರಿ ಹೇಳುವ ಇನ್ನೂ ಅನೇಕ ಕತೆಗಳಲ್ಲಿ ಯಾವುದನ್ನು ಬೇಕಾದರೂ ಆರಿಸಿಕೊಳ್ಳುವ ಸ್ವಾತಂತ್ರ್ಯವಿತ್ತು. ಉದಾಹರಣೆಗೆ ನೋಂಪಿಯ ಕತೆಗಳಿದ್ದುವು. ಪಂಚತಂತ್ರದ ಕತೆಗಳಿದ್ದುವು. ಶಾಂತಿನಾಥ ಮನಸ್ಸು ಮಾಡಿದ್ದರೆ ತನ್ನ ಕಾವ್ಯಕ್ಕೆ ಎಲ್ಲಿಂದ ಬೇಕಿದ್ದರೂ ವಿಪುಲವಾದ ವಸ್ತುವನ್ನು ಹುಡುಕಿ ತರಬಹುದಿತ್ತು. ಅಥವಾ ಅಂಥದನ್ನು ಸ್ವಂತವಾಗಿ ಸ್ವತಂತ್ರವಾಗಿ ಅವನ ಪ್ರತಿಭೆ ಸೃಷ್ಟಿಸಬಹುದಿತ್ತು. ಅವನ ತೀಕ್ಷ್ಣಮತಿಗೆ, ವಾಙ್ಮಯದ ಅಗಾಧ ಪರಿಚಯವುಳ್ಳ ಅವನ ಚುರುಕು ಬುದ್ಧಿಗೆ ಅದೇನೂ ಕಷ್ಟವಾಗಿರಲಿಲ್ಲ.

ಆದರೆ ಶಾಂತಿನಾಥ ಕೇವಲ ನಿಪುಣ ಕವಿ ಮಾತ್ರವಲ್ಲದೆ ಕಲಾಕುಶಲನೂ, ರಸಾರ್ದ್ರ ಹೃದಯನೂ ಆಗಿದ್ದನು. ಅವನಲ್ಲಿ ಬುದ್ಧಿವಂತಿಕೆಗಿಂತಲೂ ಮಿಗಿಲಾದ ಕಲಾವಂತಿಕೆ ಇತ್ತು; ಕಲಾವಂತಿಕೆಗಿಂತಲೂ ಹೆಚ್ಚಿನ ಹೃದಯವಂತಿಕೆಯಿತ್ತು. ಆದುದರಿಂದ ಶಾಂತಿನಾಥನಿಗೆ ಕೇವಲ ಮತೀಯ ಮಡಿವಂತಿಕೆಯನ್ನು ತೋರುವ ಆಡಂಬರದ ಧೀಮಂತಿಕೆ ಅಷ್ಟಾಗಿ ಹಿಡಿಸಲಿಲ್ಲ. ತನ್ನ ಕಲಾ

ಕೌಶಲ, ರಸಿಕತೆ ಮತ್ತು ಪಳಗಿದ ಶೈಲಿಗಳನ್ನು ಯಥಾವತ್ತಾಗಿ ಪ್ರದರ್ಶಿಸಲು ಸಹಕಾರಿಯಾಗಬಲ್ಲ ಕತೆ ಶಾಂತಿನಾಥನಿಗೆ ಬೇಕಿತ್ತು. ಅಂಥ ಕತೆ ಈ ಸುಕುಮಾರಸ್ವಾಮಿಯ ಕತೆಯೆಂದು ಕವಿಗೆ ಬಹುವಾಗಿ ಹಿಡಿಸಿತೆಂದು ಕಾಣುತ್ತದೆ.

ಸುಕುಮಾರಸ್ವಾಮಿಯ ಮೂಲ ಕಥೆಯನ್ನು – ಸಂಸ್ಕೃತವೋ, ಪ್ರಾಕೃತವೋ, ಕನ್ನಡವೋ ಎಲ್ಲದರ ರಸಪಾಕವೋ – ಮತ್ತೆ ಮತ್ತೆ ಓದಿ ಮನಸಾರೆ ಮೆಚ್ಚಿ ಅದನ್ನು ಕಾವ್ಯದ. ಪದ್ಯದ, ಚಂಪುವಿನ ರೂಪದಲ್ಲಿ ಇಳಿಸಬೇಕೆಂದು ಅವನು ತೀರ್ಮಾನಿಸಿರಬೇಕು. ತನ್ನ ಧರ್ಮದ ಉದಾತ್ತ ತತ್ತ್ವಗಳ, ಪಂಚಾಣುವ್ರತಗಳ ಮಹಿಮೆ ಭವ್ಯತೆಗಳನ್ನು ಲೋಕಕ್ಕೆ ತಿಳಿಯಹೇಳಲು ಈ ಕಥೆಯೇ ತಕ್ಕ ಪ್ರಣಾಳಿಕೆಯೆಂದು ಅವನಿಗೆ ಅನ್ನಿಸಿದ್ದರೆ ಅತಿಶಯವಲ್ಲ. ಬಹುಶಃ ಶಾಂತಿನಾಥನು ವಡ್ಡಾರಾಧನೆ ಗದ್ಯಗ್ರಂಥವನ್ನೇ, ಕಥಾ ಸಂಕಲನವನ್ನೇ ಓದಿರಬೇಕು: ಅದರ ಮೊದಲನೆಯ ಕತೆಗೆ ಮಾರು ಹೋಗಿರಬೇಕು. ಅಲ್ಲದೆ ಹರಿಷೇಣನ ಬೃಹತ್ಕಥಾಕೋಶವಲ್ಲಿ ಬರುವ 260 ಶ್ಲೋಕಗಳ ಅವಂತಿ ಸುಕುಮಾರನ ಕತೆಯನ್ನೂ ಓದಿರಬಹುದು. ಶಾಂತಿನಾಥನ "ಸುಕುಮಾರ ಚರಿತೆ" ಗೆ ಮೂಲ ವಡ್ಡಾರಾಧನೆಯ ಮೊದಲ ಕತೆಯಾದ ಸುಕುಮಾರಸ್ವಾಮಿಯ ಕತೆ. ಇಲ್ಲಿ ಮತ್ತೊಂದು ಸ್ವಾರಸ್ಯವನ್ನೂ ಗಮನಿಸಬೇಕು. ಶಾಂತಿನಾಥ ಕವಿ ಇದೇ ವಡ್ಡಾರಾಧನೆ ಕೃತಿಯನ್ನೇ ಅಭ್ಯಾಸ ಮಾಡಿದ್ದಾನೆಂದು ಸೂಕ್ಷ್ಮ ಪರಿಶೀಲನೆಗೆ ಸ್ಪಷ್ಟವಾಗಿ ಕಾಣುತ್ತದೆ. ಏಕೆಂದರೆ ಅವನು ತನ್ನ ಕಾವ್ಯದಲ್ಲಿ ವಡ್ಡಾರಾಧನೆಯ ಸುಕುಮಾರಸ್ವಾಮಿಯ ಕತೆಯೊಂದನ್ನೇ ಆರಿಸಿಕೊಂಡಿದ್ದರೂ ಇತರ ಕೆಲವು ಕತೆಗಳಿಂದಲೂ ಅಲ್ಲಲ್ಲಿ ಕೆಲವು ಅಂಶಗಳನ್ನೂ, ಸೂಚನೆಗಳನ್ನೂ ಸ್ವೀಕರಿಸುವುದು ಗೋಚರಿಸುತ್ತದೆ.

ವಡ್ಡಾರಾಧನೆಯ ಸುಕುಮಾರಸ್ವಾಮಿ ಕತೆಯಲ್ಲಿ ಸೂರದತ್ತ, ಯಶೋಭದ್ರೆಯರಿಗೆ ಸುಕುಮಾರನೆಂಬುವನು ಮಗನಾಗಿ ಹುಟ್ಟುವನು. ಅನಂತರ ಸೂರದತ್ತನು ಮಗನಿಗೆ "ಸೆಟ್ಟಿವಟ್ಟಂ ಗಟ್ಟಿ ತಪಂಬಟ್ಟಂ," (ಪುಟ 25) ಎಂಬ ವಿವರಣೆಗೆ ಬರುತ್ತದೆ. ಸೂರದತ್ತ ತಪಸ್ಸಿಗೆ ಹೊರಟಾಗ ಮಡದಿಯಾದ ಯಶೋಭದ್ರೆಗಾದ ಪರಿಣಾಮವೇನೆಂಬುದಾಗಲೀ, ಸೂರದತ್ತ ಯಶೋಭದ್ರೆಯರಿಗೆ ಸುಕುಮಾರನು ಜನಿಸಿದ ಬಗ್ಗೆ ಪೂರ್ವಕತೆಯನ್ನಾಗಲೀ ತಿಳಿಸಿಲ್ಲ. ಆದರೆ ಶಾಂತಿನಾಥನ ಕಾವ್ಯದಲ್ಲಿ ಆ ಪ್ರಕರಣ ವಿಸ್ತರಣಗೊಂಡಿದೆ, ಮಾರ್ಪಾಡು ಹೊಂದಿದೆ. ಕಾವ್ಯದ ಜೊಲುವಿನೊಡನೆ ಸಹಜತೆಯ ಸ್ಪರ್ಶಪಡೆದು ಕತೆ ಮತ್ತೂ ಚಿತ್ತಾಕರ್ಷಕವಾಗಿದೆ. ಅವನ ಕಾವ್ಯದಲ್ಲಿ ಯಶೋಭದ್ರೆಗೆ ಬಹುಕಾಲ ಮಕ್ಕಳಾಗದೆ ಮಮ್ಮಲ ಮರುಗಿ ಕಂದಿ ಕುಂದಿ ಬಸವಳಿದು ಬಾಡುವಳು. ಹೀಗಿರುವಾಗ ಒಮ್ಮೆ ಅಭಿನಂದನ ಮುನೀಂದ್ರರು ಬಂದಾಗ ಅವರನ್ನು ಕಂಡು 'ತನಗೆ ಪುತ್ರ ಸಂಜನನ ಉಂಟೆ?' ಎಂದು ಬೆಸಗೊಳ್ಳುವಳು. ಆಗ ಆ ಯತಿಗಳು ನಿಜಾವಧಿ ಬೋಧಮಂ ಪ್ರಯೋಗಿಸಿ ನೋಡಿ,

"ಅನತಿಶಯ ಗರ್ಭಸುಖಿ ಸುಜ
ನ ನಿಧಾನಂ ಬಾಳದಿನಕರ ಪ್ರತಿಮಾನಂ
ಜಿನಧರ್ಮನಿರತನೋರ್ವಂ
ತನೂಭವಂ ನಿನಗೆ ಪುಟ್ಟುಗುಂ ಪುಟ್ಟಲೊಡಂ"

"ಪುತ್ರಮುಖಾಬ್ಜಾಲೋಕನ
ಮಾತ್ರದೊಳಂ ಚಿತ್ತ ತಪಕ್ಕೆ ಪೋಕುಂ ಚಿತ್ರಂ
ಪುತ್ರಂ ಮುಮುಕ್ಷುದರ್ಶನ
ಮಾತ್ರದೆ ಜಿನದೀಕ್ಷೆಯುಂ ದಿಟಂ ಕೈಕೊಳ್ಗುಂ"

ಎಂದು ಅಪ್ಪಣೆ ಕೊಡಿಸಿದರಂತೆ. ಆಗ ಅವಳಿಗೆ ಏಕ ಕಾಲದಲ್ಲಿ "ಹರ್ಷವಿಷಾದವಾದಮೇನೊದವಿದುವೋ"! (9–112) – ಎಂದು ಶಾಂತಿನಾಥ ತಿಳಿಸಿದ್ದಾನೆ.

ಹೀಗೆ ಇಲ್ಲಿ ಶಾಂತಿನಾಥನು ವಡ್ಡಾರಾಧನೆಯ ಕಥೆಗಿಂತ ತನ್ನ ಕಾವ್ಯದಲ್ಲಿ ಕೊಂಚ ಬೇರೆಯಾಗಿ ಮಾಡಿಕೊಂಡ ಬದಲಾವಣೆಗೂ ಮೂಲ, ವಡ್ಡಾರಾಧನೆಯ ಇನ್ನೊಂದು ಕಥೆಯಾದ ಸುಕೌಶಲ ಕಥೆಯಲ್ಲಿದೆ. ಆ ಕಥೆಯಲ್ಲಿ ಜಯಾವತಿ ಎಂಬಾಕೆ, ತನಗೆ ಮಕ್ಕಳು ಬೇಕೆಂದು ಪ್ರಾರ್ಥಿಸುತ್ತಿರುವಾಗ ಒಂದು ದಿನ ಒಬ್ಬ ಮುನಿ ಬರಲು ಅವರನ್ನು ಕಂಡು "ಇಂತೆಂದು ಬೆಸಗೊಂಡಳ್ ಭಟಾರಾ ಎನಗೆ ಮಕ್ಕಳಕ್ಕುಮೋ ಆಗದೋ" ಎಂದು ಬೆಸಗೊಂಡೊಡೆ ಭಟಾರರಿಂತೆಂದರ್ "ವಿಭವವೈಶ್ವರ್ಯ ರೂಪಕಾಂತಿ ಸೌಭಾಗ್ಯಾದಿ ಗುಣಂಗಳಿಂದಂ ಸಿದ್ಧಾರ್ಥನಿಂದಗ್ಗಳಂ ಕುಲತಿಲಕನಪ್ಪ ಮಗನಂ ಪೆಱುವಯ್ ಪೆತ್ತಾಗಳೆಂತು ಪೂರ್ಣಮಿಯುಂದಿನ ಚಂದ್ರನಂ ಕಂಡಾಗಳಾದಿತ್ಯನಸ್ತಮಾನಕ್ಕೆ ಸಲ್ಲುವಂತೆ ಮಗನಂ ಕಂಡಾಗಳೆ ನಿನ್ನ ಭರ್ತಾರನುಂ ತಪಂಬಡುಗುಮಾರಿಸಿಯುರಂ ಕಂಡಾಗಳೆ ಮಗನುಂ ತಪಂಬಡಗುಮೆಂದು ಭಟಾರರ್ ಪೇೞ್ದು ಪೋದರಿತ್ತ ಜಯಾವತಿಗೆ ಹರ್ಷ ವಿಷಾದಂಗಳೆರಡುಮೊನ್ದೊರ್ದಲಾಗೆ ಕಾಲಂ ಸಲೆ" (ಪುಟ 43) ಎಂಬ ವಿವರಣೆಯಿದೆ. ಹಿಂದೆ ಉದಾಹರಿಸಿದ ಶಾಂತಿನಾಥನ ಮಾತುಗಳಿಗೆ ಇದೇ ಮೂಲವೆಂದು ನಿಚ್ಚಳವಾಗಿ ತಿಳಿಯುತ್ತದೆ. ಇಂಥ ಭಾಗಗಳ ಸೇರುವಿಕೆಯಿಂದ ಶಾಂತಿನಾಥನ ಕಾವ್ಯದಲ್ಲಿ ಭಾವ ಹಾಗೂ ರಸಗಳ ಅಭಿವ್ಯಕ್ತಿಗೆ ಅಧಿಕವಾಗಿ ಅವಕಾಶ ದೊರಕಿರುವುದಲ್ಲದೆ ಇಡೀ ಕತೆಗೆ ವಾಸ್ತವಿಕತೆಯು ಚೆಲುವು ಬಂದಿದೆ. "ಇವನ್ನೆಲ್ಲಾ ಪರಿಭಾವಿಸಿದರೆ ಕತೆಯ ರಚನೆಯಲ್ಲಿ ಕವಿಗೆ ನಿಷ್ಕೃಷ್ಟವಾದ ಉದ್ದೇಶವಿದೆಯೆಂದೂ ಅದರ ಮೈಯಲ್ಲಿ ಬೆಳವಣಿಗೆಗಳ ಆರೋಹಣ ಕ್ರಮದ ಸುರೇಖೆಯಿದೆಯೆಂದೂ,

ಜಿನಧರ್ಮಸಾರ ಜೀವ ಜಾಲಕ್ಕೆಲ್ಲ ಅನ್ವಯಿಸುವ ವಿಶಾಲತೆಯನ್ನು ಪಡೆದು ಸೂಕ್ಷ್ಮರೂಪದಲ್ಲಿ ಕಾವ್ಯಾಂತರ್ಗತವಾಹಿನಿಯಾಗಿದೆಯೆಂದೂ ಮನವರಿಕೆಯಾಗುತ್ತದೆ" – (ಆಚಾರ್ಯ ಶ್ರೀ ಡಿ. ಎಲ್. ಎನ್. ಮುನ್ನುಡಿ, ಪುಟ 58).

ವಡ್ಡಾರಾಧನೆಯ ಮೂವತ್ತು ಪುಟಗಳಲ್ಲಿರುವ ಸುಕುಮಾರ ಸ್ವಾಮಿಯ ಕತೆಯನ್ನು ಶಾಂತಿನಾಥ ಕವಿ ಸುಮಾರು ಒಂದು ಸಾವಿರ ಪದ್ಯಗಳಲ್ಲಿ ಹರಡಿದ್ದಾನೆ. ಹೀಗೆ ಹಿಂಜಿದರೂ ಅದರ ಮೂಲ ಸೌಂದರ್ಯ ಮಾಸಿಲ್ಲ. ಬದಲು ಅಲ್ಲಲ್ಲಿ ಅದರ ಚೆಲುವು ಹೆಚ್ಚಿದೆ. ಇದಕ್ಕೆ ಮುಖ್ಯ ಕಾರಣವೇನೆಂದರೆ ಮೂಲಕತೆಯ ಸತ್ತ್ವ ಮತ್ತು ಶಾಂತಿನಾಥನ ಪ್ರತಿಭಾ ಸಾಮರ್ಥ್ಯ. ಕಥೆಯನ್ನು ಲಂಬಿಸಿದರೂ ಅದರ ಸತ್ವವೇನೂ ಕಡಿಮೆಯಾಗದಂತೆ, ಜಾಳುಜಾಳಾಗದಂತೆ, ಪೇಲವವಾಗದಂತೆ ಕವಿ ಶಾಂತಿನಾಥ ತನ್ನ ಕಾವ್ಯನಿರ್ಮಾಣಶಕ್ತಿಯಿಂದ ಅತ್ಯಂತ ನಿರರ್ಗಳವಾಗಿ ನಡೆಸಿಕೊಂಡು ಹೋಗಿದ್ದಾನೆ. ತಾನು ಹೊಸದಾಗಿ ಸೃಷ್ಟಿಸಿಕೊಂಡ ಸನ್ನಿವೇಶಗಳಲ್ಲಿ ಸೂಚಿಸಿರುವ ಸಂವಿಧಾನ ಕೌಶಲದಿಂದ ತನ್ನ ವಿಮರ್ಶನ ಶಕ್ತಿಯನ್ನೂ, ರಮಣೀಯವಾಗಿ ರೂಪುಗೊಂಡಿರುವ ವರ್ಣನಾ ಭಾಗಗಳಲ್ಲಿ ನವೀನವಾದ ಕಲ್ಪನಾ ಸಾಮರ್ಥ್ಯವನ್ನೂ ಶಾಂತಿನಾಥ ಪ್ರದರ್ಶಿಸಿದ್ದಾನೆ.

ಹೀಗೆ ಉತ್ಕೃಷ್ಟ ಕಾವ್ಯಧರ್ಮದ ಗುಣಗಳನ್ನು ಕತೆಯಲ್ಲಿ ಕೂಡಿಸುವುದನ್ನು ಅವನು ಮರೆಯಲಿಲ್ಲ. ಶಾಂತಿನಾಥನಿಗಿಂತಲೂ ಹಿಂದಿನ ಜೈನಕವಿಗಳು ಜಿನಧರ್ಮ ಪ್ರಚಾರಕ್ಕೆಂದು ಅನೇಕ ಪುರಾಣ ಕಾವ್ಯಗಳನ್ನು ರಚಿಸಿದ್ದರು. ಆದರೆ ಅವರೆಲ್ಲರೂ ವಿಶೇಷವಾಗಿ ತೀರ್ಥಂಕರರ ಚರಿತೆಯನ್ನೇ ಕಾವ್ಯವಸ್ತುವನ್ನಾಗಿ ಆರಿಸಿಕೊಂಡಿದ್ದರು. ಅದರ ಪರಿಣಾಮವಾಗಿ ಪಂಪ, ಪೊನ್ನ, ರನ್ನರ

ಕಾವ್ಯಗಳು ಒಂದೇ ಎರಕದಲ್ಲಿ ಹೊಯ್ದ ಬೇರೆ ಬೇರೆ ಧಾತು
ಗಳಂತೆ ಅವುಗಳೆಲ್ಲಾ ಪಂಚಕಲ್ಯಾಣವೇ ಮೊದಲಾದ ಪುರಾಣ
ಗುಣಗಳು ಕಡ್ಡಾಯವಾಗಿ ಕಾಣಿಸಿಕೊಂಡು ಹೆಚ್ಚಿನ ವೈವಿಧ್ಯ
ತಪ್ಪಿಹೋಯಿತು. ಈ ಸಮಯದಲ್ಲಿ ಶಾಂತಿನಾಥ ಪ್ರತ್ಯೇಕ ದಾರಿ
ಹಿಡಿದು ತನ್ನತನವನ್ನು ತೋರಿದನು. ಹಾಗೆ ನೋಡಿದರೆ ಕನ್ನಡ
ಕವಿಗಣದಲ್ಲಿ ಶಾಂತಿನಾಥ ಮತ್ತು ರತ್ನಾಕರ ಕವಿಗಳಿಬ್ಬರೇ
ಸ್ವತಂತ್ರ ಮಾರ್ಗವನ್ನು ಹಿಡಿದ ಧೀಮಂತರಾದ ಹಿರಿಯ ಕವಿ
ಗಳೆನ್ನಬಹುದು. ದಾರಿ ಬೇರೆಯಾದರೂ ಗುರಿಯೇನೋ ಒಂದೆ –
ಸಂಸಾರ ಸಾಗರದ ಮೇಲಿದ್ದರೂ ಧರ್ಮದ ದೋಣಿಯಲ್ಲಿ ಕುಳಿತು
ರತ್ನತ್ರಯಗಳ ಹುಟ್ಟು ಹಾಕುತ್ತಾ ಮುಕ್ತಿಯ ದಡವನ್ನು ಸುರ
ಕ್ಷಿತವಾಗಿ. ಸುಲಭವಾಗಿ. ಸಂತೋಷವಾಗಿ ತಲಪುವುದು.

ವಡ್ಡಾರಾಧನೆಯ ಸುಕುಮಾರಸ್ವಾಮಿಯ ಕಥೆಯಲ್ಲಿ ಬರುವ
ಬಂಟ ವೈನಾಕನ ಹಾಗೂ ಅಜ್ಜಿ ಗಂಭೀರೆಯ ಉಪಕತೆಗಳನ್ನು
ಶಾಂತಿನಾಥ ತನ್ನ ಕಾವ್ಯದಲ್ಲಿ ಬಿಡುವುದರ ಮೂಲಕ ತನ್ನ ಕಾವ್ಯ
ಪ್ರಜ್ಞೆಯ ಔಚಿತ್ಯವನ್ನು ತೋರಿದ್ದಾನೆ. ವೈನಾಕನ ಕತೆಯನ್ನು
ಒಂದು ಸ್ವಯಂಪೂರ್ಣ ಇಲ್ಲವೇ ಸಂಪೂರ್ಣ ಕತೆ ಎನ್ನುವುದ
ಕ್ಕಿಂತ ಅದೊಂದು ಅಸಂಪೂರ್ಣ ಅಕಲಾತ್ಮಕ ಕತೆಯೆಂದು ಕರೆ
ದರೆ ಉಚಿತವಾದೀತು. ಏಕೆಂದರೆ ವೈನಾಕನ ಹೆಂಡತಿ ಕೂಗಾಡಿದ
ಮೇಲೆ ಮುಂದೆ ಕತೆ ಹೇಗೆ ಸಾಗಿತು ಎನ್ನುವ ಪ್ರಶ್ನೆ ಮೂಡು
ತ್ತದೆ. ಆದರೆ ಅದಕ್ಕೆ ಉತ್ತರ ಸಿಗದೆ ಕತೆ ಒಮ್ಮೆಲೆ ದಾಟಿಕೊಂಡು
ದಾಪುಗಾಲಿಂದ ಮುಂದೆ ಹೋಗುತ್ತದೆ. ಇದರಿಂದ ಓದುಗರ
ಮನಸ್ಸಿಗೆ ನಿರಾಶೆ ಆಗುತ್ತದೆ.

ಇದೇ ರೀತಿ ಅಜ್ಜಿ ಗಂಭೀರೆಯ ಪಾತ್ರದಲ್ಲಿ ಆಸಕ್ತಿ ಮೂಡಿ
ದರೂ ವಡ್ಡಾರಾಧನೆಯ ಕರ್ತೃ ಎಡವಿದ್ದಾನೆಂದೇ ಹೇಳಬೇಕಾ

ಗುತ್ತದೆ. ವೈನಾಕನ ಕತೆಗಿಂತ ಇದು ಕಲಾತ್ಮಕವಾಗಿ ಬಂದಿದೆ, ನಿಜ. ಆದರೆ ಇದರಲ್ಲಿ ಬರುವ ಸನ್ನಿವೇಶಗಳಲ್ಲಿಯಾಗಲೀ ಆ ಗಂಭೀರೆಯ ಪಾತ್ರದಲ್ಲಿಯಾಗಲೀ ಘನತೆ ಮೂಡುವುದಿಲ್ಲ. ಅಜ್ಜಿಯ ಹೆಸರು ಗಂಭೀರೆಯಾದರೂ ಅವಳಲ್ಲಿ ಗಾಂಭೀರ್ಯಕ್ಕಿಂತ ಘಾಟಿತನವೇ ಹೆಚ್ಚಾಗಿ ಕಾಣುತ್ತದೆ. ಈ ದೃಷ್ಟಿಯಿಂದ ಶಾಂತಿನಾಥ ಕವಿ ವಡ್ಡಾರಾಧನೆಯ ಮೇಲಿನೆರಡು ಉಪಕತೆಗಳನ್ನು ನಿರ್ಲಕ್ಷಿಸಿರುವುದು ಸೂಕ್ತ. ವಡ್ಡಾರಾಧನೆಯ ಇದೇ ಸುಕುಮಾರ ಸ್ವಾಮಿಯ ಕತೆಯಲ್ಲಿ ಬರುವ ಎರಡು ಬೇರೆ ಬೇರೆ ಪಾತ್ರಗಳಿಗೆ ಒಂದೇ ಹೆಸರಿದೆ. ಒಂದೇ ಹೆಸರಿನ ಇಬ್ಬರು ಒಂದೇ ಕತೆಯಲ್ಲಿ ಬರಬಾರದೆಂದಲ್ಲ, ಆದರೆ ಅದು ಓದುಗರನ್ನು ಗೊಂದಲದಲ್ಲಿ ಕೆಡವಿಸುವ ಸಾಧ್ಯತೆಯಿದೆ. ಅಗ್ನಿಭೂತಿ ವಾಯುಭೂತಿಯರ ತಂದೆಯ ಹೆಸರು ಸೋಮಶರ್ಮ ಎಂದಿದೆ: ಮುಂದೆ ನಾಗಶ್ರೀಯ ತಂದೆಯ ಹೆಸರೂ ಸೋಮಶರ್ಮ ಎಂದೇ ಇದೆ. ಆದರೆ ಶಾಂತಿನಾಥ ನಾಗಶ್ರೀಯ ತಂದೆಗೆ ನಾಗಶರ್ಮ ಎನ್ನುವ ಬೇರೆಯ ಹೆಸರನ್ನು ಕೊಡುವುದರ ಮೂಲಕ ಈ ತೊಡಕನ್ನು ಬಿಡಿಸಿದ್ದಾನೆ.

"ಮೂಲದ ಕತೆಯಲ್ಲಿನ ಕೆಲವು ಅಪ್ರಸಕ್ತವಾದ ಭಾಗಗಳನ್ನು ಶಾಂತಿನಾಥನು ಬಿಟ್ಟಿರುವುದು ಕಥಾನಕದಲ್ಲಿ ದೊಡ್ಡ ತೊಡಕನ್ನು ಪರಿಹರಿಸಿದಂತಾಗಿದೆ: ಕತೆಯ ಓಟ ಸುಗಮವಾಗಿದೆ ... ಅವನ ವಿಮರ್ಶನಶಕ್ತಿಗೂ, ಔಚಿತ್ಯಜ್ಞಾನಕ್ಕೂ ಸಾಕ್ಷಿಯಾಗಿದೆ ... ಕತೆ ಹೇಳುವಾಗ ಕೆಲವು ನವೀನ ಸನ್ನಿವೇಶಗಳನ್ನು ತಂದಿರುವುದು ಶಾಂತಿನಾಥನ ಸಂವಿಧಾನ ಕೌಶಲವನ್ನು ವ್ಯಕ್ತಪಡಿಸುತ್ತವೆ." (ಪ್ರೊ|| ಡಿ. ಎಲ್. ಎನ್.) ಬಾಣನ ಸಂಸ್ಕೃತ ಗದ್ಯಗ್ರಂಥವಾದ ಕಾದಂಬರಿಯ ರಸಗಂಗೆಯನ್ನು ಕವಿ ನಾಗವರ್ಮ ಕನ್ನಡದಲ್ಲಿ

ಚಂಪೂಕಾವ್ಯದ ಕಾಲುವೆಯ ಮೂಲಕ ಹರಿಸಿದ ಸುಮಾರು ಎಪ್ಪತ್ತು ವರ್ಷಗಳಲ್ಲೇ ಶಾಂತಿನಾಥ ಗದ್ಯದಲ್ಲಿದ್ದ–ಕನ್ನಡದ್ದೇ ಆದ ಕತೆಯೊಂದನ್ನು ಚಂಪೂರೂಪದಲ್ಲಿ ರಮಣೀಯವಾಗಿ ಪ್ರತಿಪಾದಿಸಿದ್ದಾನೆ, ಪರಿವರ್ತಿಸಿದ್ದಾನೆ. ಶಾಂತಿನಾಥನ ಬಳಿಕ ನೂರೈವತ್ತು ವರ್ಷಗಳಾದ ಮೇಲೆ ಬಂದ ಜನ್ನ ಮಹಾಕವಿ ಸಂಸ್ಕೃತ ವಾದಿರಾಜನ ಕಾವ್ಯವನ್ನು ಕನ್ನಡದಲ್ಲಿ ಯಶೋಧರ ಚರಿತೆಯಾಗಿ ನಟ್ಟೆಯಿಳಿಸಿದನು. ಹೀಗೆ ಕನ್ನಡ ಸಾಹಿತ್ಯದಲ್ಲಿ ಪರಿವರ್ತನ ಹಾಗೂ ಭಾಷಾಂತರ ಕಾರ್ಯಗಳು ಕಾಲಕಾಲಕ್ಕೆ ಯಥೋಚಿತವಾಗಿ ನಡೆದಿರುವುದನ್ನು ನಾವು ಗಮನಿಸಬಹುದು.

ಸುಕುಮಾರ ಚರಿತೆಯೆಂಬ ಈ ಕಾವ್ಯ ಧಾರ್ಮಿಕ ಆವರಣದ ಚೌಕಟ್ಟಿನಲ್ಲಿ ಕಂಗೊಳಿಸುವ ಸುರಮ್ಯ ನಂದನವನ. ಇಲ್ಲಿ ಸೂಸುವ ತಂಗಾಳಿಯಲ್ಲೂ ಧರ್ಮದ ಸುವಾಸನೆಯೇ ಗಮಗಮಿಸುತ್ತದೆ. ಅದು ಸುವಾಸನಾಯುಕ್ತವಾಗಿದ್ದು ಎಲ್ಲರಿಗೂ ತುಂಬ ಹಿತವೂ, ಚಿತ್ತಾಹ್ಲಾದಕರವೂ ಆಗಿದೆ. ಈ ಕಾವ್ಯೋದ್ಯಾನದಲ್ಲಿ ಕರ್ಮದ ಕೊಳೆಯನ್ನು ಕಳೆದುಕೊಂಡು ಶುಭ್ರವಾಗಿ ಶೋಭಿಸುತ್ತಾ ಬಳುಕುವ ಬಳ್ಳಿಗಳೂ, ನಿರ್ಮಲವಾಗಿ ತೂಗಾಡುವ ಹೂಗೊಂಚಲುಗಳೂ ನಯನ ಮನ ಮೋಹಕವಾಗಿವೆ.

ಸುಕುಮಾರ ಚರಿತೆಯಲ್ಲಿ ಕರ್ಮದ ಕಲ್ಲು ಕಟ್ಟಿಕೊಂಡು ಕೆಳಕ್ಕೆ ಕುಸಿಯುವ, ನರಕದೊಳಕ್ಕೆ ಧುಮ್ಮಿಕ್ಕುವ ಪಾತ್ರಗಳೂ, ಧರ್ಮದ ತೆಪ್ಪದಲ್ಲಿ ತೇಲಿಹೋಗುವ, ಮುಕ್ತಿಯನ್ನೈದುವ ಪಾತ್ರಗಳೂ ಮನಂಬುಗುವಂತೆ ನಿರೂಪಗೊಂಡಿವೆ. "ತತ್ತ್ವಕ್ಕೆ ಕವಿತೆಯ ಅವಲಂಬನ ದೊರೆತರೆ ಅದು ತನ್ನ ಶುಷ್ಕತೆಯನ್ನು ನೀಗಿಕೊಂಡು ರುಚಿಯಾಗುತ್ತದೆ. ಕವಿತೆಗೆ ಮತಧರ್ಮದ ಅವಲಂಬನೆ ಆವಶ್ಯಕವಲ್ಲವಾದರೂ ಅದು ಇದ್ದಾಗ ಕವಿತೆ ಸಾರತರವಾಗುತ್ತದೆ. ಏಕೆಂ

ದರೆ ಕಾವ್ಯವು ಆನಂದದಾಯಿಯಷ್ಟೇ ಅಲ್ಲ; ಆತ್ಮವಿಕಾಸಕಾರಿಯೂ ಹೌದು. ಆತ್ಮ ಪರಿಪಾಕವನ್ನು ಉಂಟುಮಾಡುವುದೇ ಸಕಲ ಧರ್ಮಗಳ ಸಾರಭೂತವಾದ ಉದ್ದೇಶವಾಗಿರುವುದರಿಂದ ಇಲ್ಲಿ ಕಾವ್ಯಕ್ಕೂ, ಧರ್ಮಕ್ಕೂ ಸ್ನೇಹ ಸಂಬಂಧವೇರ್ಪಡುತ್ತದೆ. ಸರ್ವ ಕಾಲದ ಸರ್ವಜನರಿಗೂ ಸಾಧಾರಣವಾದ ಜೀವನ ಸತ್ಯದ ದರ್ಶನಾನುಭವಗಳನ್ನು ದೊರಕಿಸುವುದು ಕಾವ್ಯದ ಪರಮೋದ್ದೇಶವಾಗಿರುವುದರಿಂದ ಅದರಲ್ಲಿ ಮೈದೋರುವ ಧರ್ಮಕ್ಕೂ ಸರ್ವಸಾಧಾರಣತ್ವವು ಪ್ರಾಪ್ತವಾಗಿರಬೇಕು. ವೈಯಕ್ತಿಕ ಧರ್ಮ ಸಮಸ್ತ ಮಾನವ ಧರ್ಮವಾಗಿ ಕಾವ್ಯದಲ್ಲಿ ನೆಲಸಿದಾಗ ಅದು ರಸ ರುಚಿಗಳನ್ನು ಧರಿಸಿ ಕಾವ್ಯಕ್ಕೆ ಪ್ರೇರಕವಾಗುತ್ತದೆ. ಕಾವ್ಯದಲ್ಲಿ ಧರ್ಮವು ಕರಗಿ ಅನುಭವ ರಸನೆಗೆ ಮಾತ್ರ ಅದರ ಇರವು ವೇದ್ಯವಾಗುವಂತಿರಬೇಕು. ಧರ್ಮವು ತನ್ನ ಪೃಥಕ್ ಭಾವವನ್ನು ಮರೆತು ಕಂಡೂ ಕಾಣದಂತೆ ಗೌಣವಾಗಿರಬೇಕು. ಕಾವ್ಯದಲ್ಲಿ ಧರ್ಮಕ್ಕಿರುವ ಸ್ಥಾನವಿದು. ಈ ದೃಷ್ಟಿಯಿಂದ ನೋಡಿದರೆ ಶಾಂತಿನಾಥನ ವೈಯಕ್ತಿಕ ಜಿನಧರ್ಮ ಅವನ ಕಾವ್ಯದಲ್ಲಿ ಸಕಲ ಮಾನವ ಸಾಧಾರಣ ಧರ್ಮವನ್ನು ತಳೆದು ಅದನ್ನು ನಡೆಸುವ ಸೂಕ್ಷ್ಮಶಕ್ತಿಯಾಗಿರುವುದು ತಿಳಿಯುತ್ತದೆ: ಅಲ್ಲಿ ಧರ್ಮಕ್ಕೆ ರಸತ್ವ ಉಂಟಾಗುತ್ತದೆ." (ಪ್ರೊ॥ ಡಿ. ಎಲ್. ಎನ್.). ಶ್ರೇಷ್ಠವಿಮರ್ಶಕರ ಈ ಮಾನದಂಡದಿಂದ ಅಳೆದರೆ ಶಾಂತಿನಾಥನ ಕಾವ್ಯ ಯಶಸ್ವಿಯಾದ ಉನ್ನತಮಟ್ಟದ ಕಾವ್ಯವಾಗಿ ಪರಿಶೋಭಿಸುತ್ತದೆ. ಇಲ್ಲಿ ಕವಿಯ ವೈಯಕ್ತಿಕ ಧರ್ಮ ಸಮಸ್ತ ಮಾನವ ಧರ್ಮವಾಗಿ ಪರಿಣಮಿಸಿದೆ.

ತನ್ನ ಕಾವ್ಯವನ್ನು ನಡೆಯಿಸಿಕೊಂಡು ಹೋಗುವಾಗ ಶಾಂತಿನಾಥನು ಪಂಪಮಹಾಕವಿಯನ್ನೇ ಗುರುವೆಂದು ಆದರ್ಶವಾಗಿಟ್ಟು

ಕೊಂಡು ಅವನ ಜಾಡಿಯಲ್ಲಿ ನಡೆದಿದ್ದಾನೆ. ಕಾವ್ಯದ ಆರಂಭದಲ್ಲೇ ಪಂಪನನ್ನು ಮುಕ್ತಕಂಠದಿಂದ ಕೊಂಡಾಡುತ್ತಾ ಅವನ ಪದ ತಲಕ್ಕೆ ತನ್ನ ಸ್ತವ ಕುಸುಮಾಂಜಲಿಯನ್ನು ಶಾಂತಿನಾಥ ಹೀಗೆ ಅರ್ಪಿಸಿದ್ದಾನೆ :

ರವಿಯಿಂದೆಂತು ತಮಂ ಮೃಗಾಧಿಪನಿನೆಂತುಗ್ರದ್ವಿಪಂ ತೀವ್ರವಾ
ಯುವಿನೆಂತಭ್ರಕುಳಂ ತೆರಳ್ವ ತೆಱದಿಂ ಮಿಥ್ಯಾರಜಂ ತೂಳ್ದು ಪಾ
ಱುವಿನಂ ನಿರ್ಮಳ ಧರ್ಮಮೊಂದಿ ನಿಲೆ ಪೇೞ್ದಂ ಪಂಪನತ್ಯಂತಸೌ
ಷ್ಠವದಿಂದಾದಿ ಪುರಾಣಮಂ ಬುಧಜನ ಪ್ರಸ್ತುತ್ಯ ಕಲ್ಯಾಣಮಂ
॥ ೧–೩೭ ॥

ಇಷ್ಟೇ ಅಲ್ಲದೆ "ಕವಿತೆಯ ಬಲ್ಮೆಯೊಳವಿೂ ಮಹೀಮಂಡಲ ದೊಳ್ ಕವಿ ಪಂಪನ ... ದೊರೆಗವೊರೆಗಮೇಂ ಬಂದಪರೇ?" ಎಂಬ ಕೊಂಡಾಟದ ನುಡಿ ಬೇರೆ! ಇಂತು ಶಾಂತಿನಾಥನು ಪಂಪ ನನ್ನು ಹೊಗಳಿದ ಮೇಲೆ ಮೆಲ್ಲಗೆ ತನ್ನ ಕಾವ್ಯದ ರಥವನ್ನು ಪಂಪನ ದಾರಿಗೆ ತಿರುಗಿಸಿಕೊಳ್ಳುವನು. ಆದಿಮಹಾಕವಿ ಪಂಪ ಆದಿಪುರಾಣದ ಆರಂಭದಲ್ಲಿ –

ಇದುವೆ ಸುಕವಿ ಪ್ರಮೋದ
ಪ್ರದಮಿದುವೆ ಸಮಸ್ತ ಭವ್ಯಲೋಕ ಪ್ರಮುದ
ಪ್ರದಮೆನೆ ನೆಗಱ್ದಾದಿ ಪುರಾ
ಣದೊಳಱಿವುದು ಕಾವ್ಯಧರ್ಮಮಂ ಧರ್ಮಮುಮಂ

ಎಂದು ಹೇಳಿದ್ದಾನೆ. ಶಾಂತಿನಾಥನಿಗೆ ಈ ಹೊಂದಾಣಿಕೆಯ ಮಹತ್ವ ತಿಳಿದು ತಾನೂ ಇದರಂತೆ (ಜಿನ) ಮತ ಧರ್ಮ – ಕಾವ್ಯ ಧರ್ಮಗಳೆರಡರ ಅಪೂರ್ವ ಸಾಮರಸ್ಯವನ್ನು ಸಾಧಿಸಬೇಕೆನ್ನಿ ಸಿತು. ಆದುದರಿಂದ ತನ್ನ ಕಾವ್ಯಾರಂಭದಲ್ಲೇ ಈ ಸಂಗಮವನ್ನು

ಸಾಧಿಸುವುದಾಗಿ ಸಾರಿಹೇಳಿದ್ದಾನೆ. ಆ ಘೋಷಣೆ ಕೇಳಿದರೆ ಅದು ಪಂಪನ ಪ್ರತಿಧ್ವನಿಯಂತೆಯೇ ಇದೆ.

ಸುಕವೀಂದ್ರರುಂ ವಿನಯ
ಪ್ರಕರಮುಮುೞಿದವೞೊಳೇನನಿಂ ನೋಡುವರೀ
ಸುಕುಮಾರ ಚರಿತದೊಳ್ ನೋ
ಟ್ಕೆ ಕಾವ್ಯಧರ್ಮಮುಮನಮಳ ಜಿನಧರ್ಮಮುಮಂ ॥ ೧–೭ ॥

ಹೀಗೆಯೇ ಇನ್ನೂ ಕೆಲವು ಉದಾಹರಣೆಗಳನ್ನು ಕೊಡಬಹುದಾದರೂ, ಸ್ಥಳಾಭಾವದಿಂದ ಹಾಗೆ ಮಾಡದೆ ಇನ್ನು ಒಂದು ಸನ್ನಿವೇಶದ ನಿದರ್ಶನವನ್ನು ಕೊಟ್ಟು ಶಾಂತಿನಾಥನ ಮೇಲಿರುವ ಪಂಪನ ಪ್ರಭಾವವನ್ನು ಸ್ಪಷ್ಟಪಡಿಸಬಹುದು. ಆದಿಪುರಾಣದಲ್ಲಿ ನೀಲಾಂಜನೆಯು ನೃತ್ಯಮಾಡುತ್ತಾ ಆಯು ಮುಗಿದು ಅದೃಶ್ಯಳಾದಾಗ ಪುರುದೇವ ಸಂಸಾರದ ಅನಿತ್ಯತೆಯನ್ನು ಕುರಿತು ಹೀಗೆ ಚಿಂತಿಸುತ್ತಾನೆ:

ಎನಿತಾನುಮಂಬುನಿಧಿಗಳ
ನನೇಕ ನಾಕಂಗಳಲ್ಲಿ ಕುಡಿದುಂ ಪೋಯ್ತು
ಲ್ಲೆನಗೆ ನರಭೋಗಮೆಂಬೀ
ಪನಿಪುಲ್ಲಿಂ ನಕ್ಕೆ ತೃಷ್ಣೆ ಪೇೞ್ ಪೋದಪುದೇ ॥ ೯–೮೦ ॥

ಈ ಭಾವವನ್ನು ಹೆಚ್ಚುಕಡಿಮೆ ಇದೇ ರೀತಿಯಲ್ಲಿ ಶಾಂತಿನಾಥನೂ ತನ್ನ ಕಾವ್ಯದಲ್ಲಿ ಪ್ರತಿಧ್ವನಿಸಿದ್ದಾನೆ. ಆ ಪದ್ಯ ಇಂತಿದೆ:

ಅನುಪಮ ದಿವಿಜ ಸುಖಾಮೃತ
ವನನಿಧಿಯುಂ ಹೀರ್ದು ತೃಷ್ಣೆ ಪೋಗದೆ ಮಾಯ್ತೊ
ಮನುಜ ಸುಖಮೆಂಬ ಮಂಜಿನ
ಪನಿಪುಲ್ಲಿಂ ನಕ್ಕೆ ತೃಷ್ಣೆ ತಾಂ ಪೋದಪುದೇ ॥ ೧೧–೮೧ ॥

ಹೀಗೆ ತನ್ನ ಕಾವ್ಯಸೌಧದ ಸೌಂದರ್ಯವನ್ನು ಹೆಚ್ಚಿಸಲು ಹಲವು ಕಡೆಯಿಂದ ಶಾಂತಿನಾಥ ಸೂಚನೆಗಳನ್ನೂ, ಹೇಳಿಕೆಗಳನ್ನೂ ಸ್ವೀಕರಿಸಿದ್ದಾನೆ. ಪಂಪಕವಿ ವ್ಯಾಸ ಜಿನಸೇನರಿಂದ ಸಿದ್ಧವಾದ ವಸ್ತುವನ್ನು ಉಪಯೋಗಿಸಿಕೊಂಡರೂ ತನ್ನ ಪ್ರತಿಭೆಯ ಅಮೃತ ಸ್ಪರ್ಶದಿಂದ ಮೂಲ ಕತೆಯನ್ನು ಇನ್ನೂ ದೇದೀಪ್ಯಮಾನವಾಗಿ ಪ್ರಜ್ವಲಿಸುವಂತೆ ಉಜ್ವಲಗೊಳಿಸಿದ್ದಾನೆ. ರನ್ನಕವಿ ಪಂಪನ ನೆರಳಿನಲ್ಲೇ ತನ್ನ ಪ್ರತಿಭೆಯನ್ನು ಅರಳಿಸಿಕೊಂಡಿದ್ದರೂ ತನ್ನ ಸಹಜ ಗುಣವಾದ ಶಕ್ತಿಯನ್ನು ವಿಶೇಷವಾಗಿ ತೋರಿ, ಮೂಲಕ್ಕೆ ಮೆರುಗು ಇತ್ತಿದ್ದಾನೆ. ವಡ್ಡಾರಾಧನೆಯ ಕರ್ತೃವಿಗೆ ಮೂಲ ಪ್ರಾಕೃತವೊ ಅಥವಾ ಬೇರೆ ಯಾವುದೋ ಆಗಿರಲಿ, ಅಲ್ಲಿಯ ಸುಕುಮಾರಸ್ವಾಮಿ ಕತೆಯನ್ನು ಶಾಂತಿನಾಥ ಕವಿ ಬಳಸಿಕೊಂಡು ತನ್ನ ಸಹಜ ಕಲ್ಪನೆ ಶೈಲಿಗಳಿಂದ ಬೆಳಗಿಸಿದ್ದಾನೆ.

ಕನ್ನಡ ಸಾಹಿತ್ಯಕ್ಕೆ ಹನ್ನೊಂದನೆಯ ಶತಮಾನದಲ್ಲಿ ಮುಸುಕಿದ್ದ ಮಬ್ಬಿನ ತೆರೆಯನ್ನು ಓಸರಿಸಿ ತನ್ನ ಪ್ರತಿಭೆಯ ನಂದಾದೀವಿಗೆಯನ್ನು ಹಚ್ಚಿ ಹೆಚ್ಚು ಬೆಳಕನ್ನು ಕನ್ನಡದ ವಾಙ್ಮಯದ ಮೇಲೆ ಚೆಲ್ಲಿದ ಹಿರಿಯ ಕವಿ ಶಾಂತಿನಾಥ. ಏಕೆಂದರೆ ಶಾಂತಿನಾಥ ಕವಿಯ ಕೃತಿ ಪ್ರಕಟನಗೊಳ್ಳುವವರೆಗೂ ಕನ್ನಡ ಸಾಹಿತ್ಯದಲ್ಲಿ ಹನ್ನೊಂದನೆಯ ಶತಮಾನ ಬರಡುಗಾಲವೆಂಬ ಅಪಖ್ಯಾತಿಗೆ ಪಕ್ಕಾಗಿತ್ತು. ಆದರೆ ಸುಕುಮಾರ ಚರಿತೆ ಅಚ್ಚಾಗಿ ಕಾವ್ಯ ವಿಮರ್ಶಕರ ಹಾಗೂ ವಿದ್ವಾಂಸರ ಗಮನಕ್ಕೆ ಬಂದಮೇಲೆ ಶಾಂತಿನಾಥನ ಕವಿತಾ ಸಾಮರ್ಥ್ಯವನ್ನು ಮೆಚ್ಚಿ ತಲೆದೂಗಿ ಶಾಂತಿನಾಥನು ಹನ್ನೊಂದನೆಯ ಶತಮಾನಕ್ಕೆ ಜೀವಕಳೆ ತುಂಬಿದ ಕವಿಯೆಂದು ಮುಕ್ತಕಂಠದಿಂದ ಕೊಂಡಾಡಿದ್ದಾರೆ. ಕನ್ನಡದಲ್ಲಿ ಬಹುಮಂದಿ ಕವಿಗಳಲ್ಲಿ ಕಾಣುವ ಕೊರತೆಯೊಂದರೆ ಕಾವ್ಯದ ಸಮಗ್ರತೆಗೆ ಬೇಕಾದ ಏಕಾ

ಗ್ರತೆಯ ಅಭಾವ. ಕೇವಲ ಕೆಲವೇ ಸಮರ್ಥ ಕವಿಗಳು ಪಂಪ. ರನ್ನ. ಜನ್ನ. ಆಂಡಯ್ಯನಂಥವರು – ಈ ಬಗೆಯ ದೋಷವನ್ನು ತಪ್ಪಿಸಿ. ಕವಿಯ ಸಾಮರ್ಥ್ಯ ಸಮರ್ಥವಾದ ರೀತಿಯಲ್ಲಿ ಯಶಸ್ವಿಯಾಗುವಂತೆ ನೋಡಿಕೊಂಡಿದ್ದಾರೆ. ಶಾಂತಿನಾಥನೂ ಆ ಆದರ್ಶದ ಜಾಡಿನಲ್ಲಿ ನಡೆದ ಧೀಶಕ್ತಿಯ ಪ್ರೌಢ ಕವಿ.

ಸುಕುಮಾರಸ್ವಾಮಿಯ ಕತೆ ಒಂದು ಧಾರ್ಮಿಕ ಕತೆಯಾದರೂ ವಾಸ್ತವವಾಗಿ ಇದು ಜೀವಂತಸತ್ತ್ವದಿಂದ ರಸಸಂಪುಷ್ಟವಾಗಿದೆ. ಅದರಲ್ಲಿಯೂ ಸರ್ವಾಂಗ ಸುಂದರವಾದ ಈ ಕಾವ್ಯದ ಪಾತ್ರಗಳು ಅತ್ಯಂತ ಮನೋಜ್ಞವಾಗಿವೆ. ಶಾಂತಿನಾಥ ಕವಿ ಪಾತ್ರ ಚಿತ್ರಣದಲ್ಲಿ ತೀರ ಪರಿಣತ ಕವಿಯೆನ್ನಬಹುದು. ಅವನು ಈ ನೈಪುಣ್ಯವನ್ನು ಕಾವ್ಯದ ಪ್ರಮುಖ ಪಾತ್ರಗಳಲ್ಲಿ ಹೇಗೆ ಚಿತ್ರರಿಸಿದ್ದಾನೆಂಬುದನ್ನು ನಾಲ್ಕೈದು ಪಾತ್ರಗಳನ್ನು ವಿಮರ್ಶಿಸುವುದರ ಮೂಲಕ ಪರಿಶೀಲಿಸಬಹುದು.

ಯಶೋಭದ್ರೆ

ಕಾವ್ಯದ ಕೊನೆಕೊನೆಗೆ. ಅಂದರೆ ಒಂಬತ್ತು ಮತ್ತು ಹತ್ತನೆಯ ಆಶ್ವಾಸಗಳಲ್ಲಿ ಸುಕುಮಾರನ ತಾಯಿಯಾದ ಯಶೋಭದ್ರೆಯ ಪಾತ್ರ ಬಂದಿದೆ. ಯಶೋಭದ್ರೆ ಸಹಜ ಸುಂದರಿ, ಕುಲಲಲನೆ. ರೂಪವತಿಯೂ. ಲಾವಣ್ಯವತಿಯೂ, ವಿಲಾಸವತಿಯೂ ಆದ ಆಕೆ ಮದನನ ಮಂಗಳ ರಾಜ್ಯಲಕ್ಷ್ಮಿಯಂತೆ ಸೊಗಯಿಸಿ ಮನವನ್ನು ಸೆರೆಹಿಡಿಯುವಂತಿದ್ದಳು.

ಉದಾ : ಮೊಗಮಂ ತಾವರೆಗೆತ್ತು. ಕಣ್ಮಲರ್ಗಳಂ ನೀಲೋತ್ಪಲಂಗೆತ್ತು, ಸೆ
ಳ್ಳುಗುರಂ ಕೇದಗೆಗೆತ್ತು ಹಸ್ತತಳಮಂ ಸತ್ಪಲ್ಲವಂಗೆತ್ತು ತ
ನ್ಮೃಗಶಾಬಾಕ್ಷಿಯನಿಂತು ಮನ್ಮಥವನಶ್ರೀಗೆತ್ತು ಭೃಂಗಂಗಳೋ
ಲಗಿಸುತ್ತಿರ್ದಪುವೆಂಬಿನಂ ಸೊಗಯಿಕುಂ ನೀಳಾಳಕಂ ಕಾಂತೆಯಾ ॥

ಅವರೂ ಶಾಂತಿನಾಥನ ಮಾತೃಭಕ್ತಿಯೇ ಈಕೆಯಲ್ಲಿ ಸಮಾವೇಶ ಗೊಂಡಿದೆಯೋ ಎಂಬಂತೆ ಇವಳ ವ್ಯಕ್ತಿಚಿತ್ರವನ್ನು ಕವಿ ಅವಿಸ್ಮರಣೀಯವಾಗಿ ರೂಪಿಸಿದ್ದಾನೆ. ಯಶೋಭದ್ರೆಯ ಶ್ರೀಮಂತಿಕೆಯ ಔನ್ನತ್ಯ, ಪುತ್ರದೋಹಳದ ತೀವ್ರತೆ ವಿಶೇಷವಾಗಿ ವ್ಯಕ್ತವಾಗಿದೆ, ಸ್ಫುಟವಾಗಿ ಪ್ರಕಾಶಗೊಂಡಿದೆ.

ಆಡುವ ನಲಿದಾಡುವ ನಡೆ
ನೋಡುವ ಕೊರಳಪ್ಪಿಕೊಳ್ವ ಭಕ್ಷ್ಯಾದಿಗಳಂ
ಬೇಡುವ ಮಕ್ಕಳ ಬಾಳ
ಕ್ರೀಡೆಗಳಂ ನೋಡುತಿರ್ಪುದೊಂದಿರವಲ್ತೇ ॥

ಎನಿತೊಳವು ಬಾಳಕೇಳಿಗ
ಳನಿತಱೊಳಂ ಮುದ್ದುವಡೆದು ಮನೆಯಂಗಣದೊಳ್
ಮನಮೊಸೆದಾಡುವ ಮಕ್ಕಳ
ವಿನೋದಮಂ ಕಾಣ್ಬ ದಿವಸಮೊಂದಾದಪುದೋ ॥

ಇವಳ ಪಾತ್ರದಲ್ಲಿ ಲೋಕದ ಎಲ್ಲ ತಾಯಂದಿರ ಸಹಜ ಮಾತೃವಾತ್ಸಲ್ಯ ಕೋಡಿವರಿದಿದೆಯೆನ್ನಬಹುದು. ತನ್ನ ಮಗ ಸುಕುಮಾರನನ್ನು ಕಂಡರೆ ಅವಳ ಮಮತೆ ಉಕ್ಕಿ ಹರಿಯುತ್ತದೆ. ಪುತ್ರದರ್ಶನದಿಂದ, ಯತಿಯ ಆದೇಶದಂತೆ ತನ್ನ ಪತಿ ಮುನಿಯಾದಾಗ ತಾನೂ ಕಂತಿಯಾಗಿ ಹೊರಡದೆ ಮಗನಿಗಾಗಿ ಮನೆಯಲ್ಲೇ ನಿಂತಳು.

ಇನಿಯನಗಲ್ದು ಪೋದ ಪೆಱಗಿರ್ಪುದು ಸೂಱೆನಗಲ್ತು ಪೋಪೊಡಂ
ತನಯ ವಿಮೋಹಮೆಂಬ ನಿಗಳಂ ತೊಡರ್ದಿರ್ದಪುದೇವೆನೆಂದು ಕಾ
ಮಿನಿ ನಿಜಜೀವಿತೇಶ್ವರನಗಲ್ಕೆಯೊಳಂ ತನುಜನ್ಮಮೋಹ ಬಂ
ಧನದೊಳೆ ಸಿಲ್ಕಿ ನಿಂದಳೆನೆ ಪುತ್ರವಿಮೋಹಮನಾರೊ ಮೀಱುವರ್ ॥

ಯಶೋಭದ್ರೆ ಅತ್ಯಂತ ದಕ್ಷಳಾದ ಯಜಮಾನಿಯೂ ಹೌದು. ಪತಿಯು ನಿರ್ಗಮನಾನಂತರ ಇಡೀ ಕುಟುಂಬದ ಆಗು ಹೋಗುಗಳ ಮೇಲ್ವಿಚಾರಣೆ ತನ್ನ ಮೇಲೆ ಬಿದ್ದಾಗಲೂ ಅದನ್ನು ಸಮರ್ಥ ವಾಗಿ ನಿರ್ವಹಿಸಿದಳು. "ತೊಟ್ಟಿಲು ತೂಗುವ ಕೈ ಮನೆಯನ್ನೂ ಆಳಬಲ್ಲದು-ಬೆಳಗಬಲ್ಲದು" ಎಂದುದನ್ನು ಸ್ಪಷ್ಟಪಡಿಸಿದಳು. ಅವಳು ಅತಿಥಿ ಸತ್ಕಾರದ ಉತ್ತಮ ಸಂಪ್ರದಾಯವನ್ನು ಹೇಗೆ ಪಾಲಿಸುತ್ತಿದ್ದಳೆಂಬುದಕ್ಕೆ ವೃಷಭಾಂಕ ದೊರೆಯನ್ನು ಉಪಚರಿ ಸಿದ ಒಂದು ಸಂದರ್ಭ ಸೊಗಸಾದ ದೃಷ್ಟಾಂತ. ಮೂವತ್ತೆರಡು ಜನ ಸೊಸೆಯಂದಿರನ್ನು ಸುಖವಾಗಿ ಬಾಳಿಸಿದಳು. ಅಷ್ಟು ಜನ ರಲ್ಲಿ ಯಾರೊಬ್ಬರಿಗೂ ಒಲವರವನ್ನು ತೋರದೆ ಎಲ್ಲರಿಗೂ ಸಮಾನವಾದ ಪ್ರೀತ್ಯಾದರಗಳಿಂದ ಕಾಣುತ್ತಿದ್ದಳೆಂಬುದಕ್ಕೆ ಆ ಒಂದು ಅಮೂಲ್ಯ ರತ್ನಗಂಬಳಿಯ ಸನ್ನಿವೇಶ ಉತ್ತಮ ಉದಾ ಹರಣೆಯಾಗಿದೆ.

ವೃಷಭಾಂಕ

ಸುಕುಮಾರನು ಜನಿಸಿದ ನಾಡಿಗೆ ಒಡೆಯನಾದ ವೃಷಭಾಂಕನ ನಿರ್ವಿಕಾರ ಸಮತಾದೃಷ್ಟಿ, ಪ್ರಜಾವಾತ್ಸಲ್ಯ, ಮಾತ್ಸರ್ಯರಹಿತ ಪರಿಶುದ್ಧ ಪ್ರೀತಿ ಮನಸಂಬುಗುವಂತೆ ವ್ಯಕ್ತವಾಗಿವೆ. ತಾನು ಕೊಂಡುಕೊಳ್ಳಲಾಗದ ರತ್ನಗಂಬಳಿಯನ್ನು ಸುಕುಮಾರನ ಅಂಬಿಕೆ ಯಾದ ಯಶೋಭದ್ರಾಂಬಿಕೆ ಕೊಂಡುದನ್ನು ಕೇಳಿ ಅಸೂಯಾ ಪರನಾಗಲಿಲ್ಲ. ಅದರ ಬದಲು ತನ್ನ ರಾಜ್ಯದಲ್ಲಿ ಇಂಥ ಐಶ್ವರ್ಯ ವಂತರಿರುವರೆಂದು ಕೃತಾರ್ಥನಾದ. ಇದು ಅವನ ಔದಾರ್ಯ ಗುಣದ ಪ್ರದರ್ಶನ. ಆತ ಅಷ್ಟೇ ಕುತೂಹಲಿಯೂ ಹೌದು. ರತ್ನಗಂಬಳಿಯವನನ್ನು ಬಹುಮಾನಿಸಿ ಕಳುಹಿಸಿದ ಮೇಲೆ ಮಾರ ನೆಯ ದಿನದ ಒಡ್ಡೋಲಗದಲ್ಲಿ ಮತ್ತೆ ಅವನ್ನೇ ಪ್ರಸ್ತಾಪಿಸಿ

ಬಹುಶಃ ಇದನ್ನು ಕೊಳ್ಳುವ ಧನಿಕರು ಯಾರೂ ಇರಲಾರ ರಲ್ಲವೆ? ಎನ್ನುತ್ತಾನೆ. 'ಇದ್ದಾರೆ' ಎಂದಾಗ ಒಡನೆಯೇ ಯಾರು ಎಂಬ ಪ್ರಶ್ನೆ ಬಾಯಿಂದ ಬರುತ್ತದೆ. ಇಂಥವರು ಎಂದು ತಿಳಿ ದಾಗ ಅವನ ಕುತೂಹಲಕ್ಕೆ ಗರಿಮೂಡಿ ಹಾರಲು ತವಕಿಸುತ್ತದೆ. ತನಗಿಂತಲೂ ಸಿರಿವಂತರು ತನ್ನ ರಾಜಧಾನಿಯಲ್ಲೇ ತನ್ನ ಪ್ರಜೆ ಯಾಗಿ ಇದ್ದಾರೆಂದು ತಿಳಿದು ವೃಷಭಾಂಕ ದೊರೆ ಅಸೂಯಾಪರ ನಾಗಲಿಲ್ಲ, ದ್ವೇಷಭಾವನೆಯನ್ನು ತಳೆಯಲಿಲ್ಲ. ಅದರ ಬದಲು 'ನನ್ನ ಪ್ರಜೆಗಳಲ್ಲಿ ಅಂಥ ಶ್ರೀಮಂತರೂ ಇರುವವರೋ!' ಎಂದು ಆನಂದಪಡುವನು.

ಅಂ ಬಿಲಲಾಜಿದ ವಸ್ತುಗ
ಳಂ ಬಿಲಲಾರ್ಪನ್ನರೆನ್ನ ಪೊಟಿಲೊಳ್ ಮಹಿಮಾ।
ಡಂಬರದಿನಿರ್ಪೊಡಿನ್ನೆ
ನ್ನಿಂ ಬಿಟ್ಟು ಕೃತಾರ್ಥರಾರೊ ಈ ಮಹಿತಳದೊಳ್ ॥

ಈ ಸಂದರ್ಭ ವೃಷಭಾಂಕನ ಘನತೆ ಔದಾರ್ಯಗಳನ್ನು ಪ್ರತಿಬಿಂಬಿ ಸುತ್ತದೆ.

ಸುಕುಮಾರ

ಸುಕುಮಾರ ಈ ಕಾವ್ಯದ ಅಧಿಪತಿ, ನಾಯಕ. ಆದರೆ ಅವನ ಆಗಮನಕ್ಕಾಗಿ, ಹನ್ನೆರಡು ಆಶ್ವಾಸಗಳ ಈ ಕಾವ್ಯದಲ್ಲಿ ಮೊದಲ ಒಂಬತ್ತು ಆಶ್ವಾಸಗಳಲ್ಲಿ ಸಿದ್ಧತೆ ನಡೆಯುತ್ತದೆ. ಸುಕುಮಾರನ ಜನನವಾಗುವುದು ಹತ್ತನೆಯ ಆಶ್ವಾಸದಲ್ಲಿ. ಅಲ್ಲಿಯವರೆವಿಗೂ ಅವನ ಜೀವ ಹಾದುಬಂದ ಭವಗಳೆಷ್ಟು? ಆತ ಧರಿಸಿ ಕಳೆ ದೊಗೆದ ದೇಹಗಳೆಷ್ಟು? ಕ್ರಮಕ್ರಮವಾಗಿ ಆ ಜೀವ ಅಧಃಪತನ ದಿಂದ ಮೇಲೆದ್ದು ಉದ್ಧಾರವಾದ ಬಾಳಿನ ಚಿತ್ರ ನಿಜವಾಗಿಯೂ

ಒಂದು ವಿಕಾಸದ ಪರೇರಿಕೆಯು ರಮ್ಯ ಚಿತ್ರ. ಸೃಷ್ಟಿಯ ವಿಚಿತ್ರ ವೆಲ್ಲವೂ ಆ ಚಿತ್ರದಲ್ಲಿ ಸಮಾವೇಶವಾಗಿದೆ. ಧರ್ಮವನ್ನು ನೆಮ್ಮಿದ ಯಾವುದೇ ಜೀವ ಮೇಲ್ಮೊಗವಾಗಿ ಮಹತ್ತಾದುದಕ್ಕೆ ಜಿಗಿಯ ಬಹುದೆಂಬುದನ್ನೂ, ಕರ್ಮವನ್ನು ಕಟ್ಟಿಕೊಂಡ ಜೀವ ಎಷ್ಟೇ ಸತ್ತ್ವಶಾಲಿಯಾದರೂ ಕುಸಿಯುತ್ತದೆ ಎಂಬುದನ್ನೂ ಸುಕು ಮಾರನ ಹಿಂದಿನ ಭವಗಳ ಏಳು ಬೀಳುಗಳಲ್ಲಿ ಗುರುತಿಸಬಹುದು. ತನ್ನ ಸುತ್ತಲೂ ಸುಖ ಸಂತೋಷ. ಸೌಂದರ್ಯ ಸಿರಿವಂತಿಕೆಗಳ ಸಮುದ್ರವೇ ತುಂಬಿ ಗಂಭೀರವಾಗಿ ಹರಿಯುತ್ತಿದ್ದರೂ ಅದೆಲ್ಲ ವನ್ನೂ ಕೇವಲ ತೃಣಸಮಾನವಾಗಿ ಕಂಡು ಸುಕುಮಾರನು ತೊರೆದು ಹೋದುದು ಅವನ ದೃಢವಾದ ಮನೋನಿರ್ಧಾರವನ್ನೂ ಮಿಗಿಲಾಗಿ ಅವನ ಮನಸ್ಸಿನ ಪರಿಪಕ್ವ ಸ್ಥಿತಿಯನ್ನೂ ಬಿತ್ತರಿಸು ತ್ತದೆ. ಸುಕುಮಾರಭವದ ವೈಭವ ಅನ್ಯಾದೃಶ. ಅತ

ಪ್ರಿಯಸತಿಯರೊಳಲ್ಲದೆ ಕೂ
ಡಿಯಱಿಯನತ್ಯಂತರುಚಿರ ಮಣಿಕುಟ್ಟಿಮ ಭೂ
ಮಿಯನಲ್ಲದೆ ನೆಲನಂ ಮೆ
ಟ್ಟಿಯಱಿಯನೇಂ ಗರ್ಭಸುಖಿಯೊ ತತ್ಸುಕುಮಾರಂ ॥

ಮಡದಿಯೊಡನೆ ಮಲಗಿದ್ದ ಸುಕುಮಾರನು ಬೆಳಗಿನ ಜಾವದ ನೀರವತೆಯಲ್ಲಿ ದೂರದಿಂದ ಕೇಳಿಬಂದ ಮುನಿಯ ದಿವ್ಯ ಧರ್ಮ ಧ್ವನಿಯನ್ನು ಆಲಿಸಿದೊಡನೆಯೇ ಮಡದಿಯ ಪಕ್ಕದಿಂದ ಮೇಲೆದ್ದು ನೇರವಾಗಿ ವೈರಾಗ್ಯದೆಡೆಗೆ ನಡೆದು ಹೋಗುವ ಘಟನೆ ಬುದ್ಧನ ಬಾಳಿನ ಇಂಥದೇ ಸನ್ನಿವೇಶವನ್ನು ಸಹೃದಯರ ಸ್ಮರಣೆಗೆ ತರುತ್ತದೆ. ಈ ಇಬ್ಬರೂ ಆತ್ಮೋನ್ನತಿಗಾಗಿ, ಮುಕ್ತಿಗಾಗಿ ಮನೆ ಮಡದಿಯರನ್ನು ಬಿಟ್ಟು ಹೊರಟ ಮಹಾತ್ಮರು. ಅವನು ಮಹಾ ಕಾಳದಲ್ಲಿ ಅಂತರ್ಮುಖಿಯಾಗಿ ತಪಕ್ಕೆ ತೊಡಗಿದಾಗ ಪೂರ್ವ ಭವದ ಸೇಡಿನಿಂದ ಬಂದ ನರಿ ಮತ್ತು ಮರಿಗಳು ಮೈಯನ್ನು

ಬಗೆದು ಆಗಿದು ತಿಂದರೂ. 'ಒಂದಿದ ಧೈರ್ಯ ಒಂದಿದ ಅಳವು.' ಅಸದಳವಾದುದು.

ಇನ್ನು ಉಳಿದ ಪಾತ್ರಗಳು: ತನ್ನ ತಂದೆಗೆ ಒದಗಿ ಬಂದಿದ್ದ ಆಪತ್ತನ್ನು ಕೇವಲ ತನ್ನ ಚುರುಕುಬುದ್ಧಿಯ ಬಲದಿಂದ ಬಹಳ ಸುಲಭವಾಗಿ ಹೋಗಲಾಡಿಸಿದ ನಿಶಿತಮತಿ ಸುಮತಿಯ ಪಾತ್ರ; ಸತ್ಯವಾಕ್ಯ ಪರಿಪಾಲನೆಗಾಗಿ ಅನೇಕ ಸಾಹಸಗಳನ್ನು – ತನ್ನ ಪ್ರಾಣವನ್ನೂ, ಪಾತಿವ್ರತ್ಯವನ್ನೂ ಪಣವಾಗೊಡ್ಡಿ ಸತ್ಯಸಂಧತೆಯನ್ನೇ ಸಾಧಿಸಿದ ಸುಧಾಮೆ: ಇನ್ನೇನು ಧಾರೆಯ ಸುಮುಹೂರ್ತ ಮುಗಿದು ಎಲ್ಲವೂ ಸುಖಾಂತವಾಗಿ ನಡೆಯಬೇಕಾಗಿದ್ದ ಮದುವೆಯ ಮಂಗಳ ಒಸಗೆ ನಿಂತು ತನ್ನ ಬಾಳು ದುರಂತವಾಗಿ ಪರಿಣಮಿಸಿ ಕೊನೆಗೆ ದಾರಿತಪ್ಪಿ ನಡೆದು ಶಿಕ್ಷೆಗೆ ಗುರಿಯಾದ ಮದಾಳಿ; ತನ್ನ ಇಬ್ಬರು ಮಕ್ಕಳ ಅಧಃಪತನ-ಉದ್ಧಾರಗಳನ್ನು ನೋಡಿ ಅದರ ನೋವು ನಲಿವುಗಳೆರಡನ್ನೂ ಜೀವಂತಕಾಲದಲ್ಲೇ ಅನುಭವಿಸಿದ ಕಾಶ್ಯಪಿ; ಅಣುವ್ರತಗಳ ಅನುಷ್ಠಾನದಿಂದಾಗಿ ಅತಿ ಕ್ಷಿಪ್ರದಲ್ಲೇ ಅತಿಶಯ ಪದವಿಯನ್ನು ಪಡೆದ ನಾಗಶ್ರೀ; ಮೈದುನನಿಂದಾದ ಅಪಮಾನದ ಸೇಡನ್ನು ತೀರಿಸಿಕೊಳ್ಳುವ ಸಲುವಾಗಿ ಪ್ರತೀಕಾರ ಮನೋಭಾವದಿಂದ ತಿರ್ಯಕ್ ಜಾತಿಯಲ್ಲಿ ಹುಟ್ಟಿ ತೊಳಲಾಡಿದ ಸೋಮದತ್ತೆ; ಎಂಥವರಿಗೂ ಅಸಹ್ಯವನ್ನುಂಟು ಮಾಡುವಂತಿದ್ದ ಅತ್ಯಂತ ವಿಕಾರವಾದ ತನ್ನ ಆಕಾರದಿಂದ ಸಂಕಟಪಟ್ಟ ಹುಟ್ಟುಕುರುಡಿ ಮಾತಂಗಿ – ಮೊದಲಾದ ಸ್ತ್ರೀ ಪಾತ್ರಗಳು ಸಹೃದಯರ ಹೃದಯವನ್ನು ಸೂರೆಗೊಳ್ಳುತ್ತವೆ. ಮಾವನೂ, ಗುರುವೂ ಆದವರಿಗೆ ತನ್ನ ತಮ್ಮನಿಂದಾಗಿ ಅಪಮಾನವಾದಾಗ ತಾನೇ ಮುನಿದೀಕ್ಷೆ ಪಡೆದು ಆದರೂ ತನ್ನ ಸೋದರ ಜೀವದ ಉದ್ಧಾರಕ್ಕಾಗಿ ಶ್ರಮಿಸಿ ನಿರಂತರವಾಗಿ ನೆರವಾದ ಅಗ್ನಿಭೂತಿ; ಮೊದಲಲ್ಲಿ ಮಹಾಮಂತ್ರಿಯಾಗಿದ್ದು ಉಂಗುರದ ವ್ಯಾಜದಿಂದ

ಕಪಟದೀಕ್ಷೆಯ ಮೂಲಕ ದಿಟದ ಯತಿಯಾಗಿ ಪರಿವರ್ತನೆ ಪಡೆದು ಕಾವ್ಯದುದ್ದಕ್ಕೂ ಇತರ ಅನೇಕ ವ್ಯಕ್ತಿಗಳ ಶ್ರೇಯಸ್ಸಿಗಾಗಿ ಶ್ರಮಿಸಿ ಸಹಾಯಕನಾದ ಯತೀಂದ್ರ, ಸೂರ್ಯಮಿತ್ರ; ತಾನು ಪರಮ ಪಂಡಿತೋತ್ತಮನಾದರೂ ತನಗೆ ಕೇಡಾಳಿಗಳಾದ ದುಷ್ಟಮಕ್ಕಳು ಹುಟ್ಟಿದರಲ್ಲಾ ಎಂಬ ಕೊರಗಿನಿಂದ ಕರಗಿ ಮರಣ ಹೊಂದಿದ ಸೋಮಶರ್ಮ; ತಾನು ದ್ವಿಜನಾದರೂ ತನ್ನ ಮಗಳು ಜೈನಮುನಿಯ ಬಳಿ ಪಂಚಾಣುವ್ರತಗಳನ್ನು ಸ್ವೀಕರಿಸಿದಳೆಂದು ಸಹಜವಾಗಿಯೇ ಕೋಪೋದ್ರಿಕ್ತನಾಗಿ ರೇಗಾಡಿ ಕೂಗಾಡಿ ಕೊನೆಗೆ ಪ್ರಶಾಂತವಾದ ಚಿತ್ತದಿಂದ ದೀಕ್ಷೆ ಹೊಂದಿದ ನಾಗಶರ್ಮ – ಮುಂತಾದ ಪುರುಷ ಪಾತ್ರಗಳು ಕವಿ ಕಡೆದ ದಿವ್ಯಶಿಲ್ಪಗಳು.

ಶಾಂತಿನಾಥನಲ್ಲಿ ಕೆಲವು ಹಿರಿಯ ಗುಣಗಳನ್ನು ಕಾಣಬಹುದು. ಶಾಂತಿನಾಥ ಕವಿ ಜಿನಧರ್ಮದ ಮಹೋನ್ನತಿಯನ್ನು ಲೋಕಕ್ಕೆ ಬಿತ್ತರಿಸುವ ಶ್ರದ್ಧಾನ್ವಿತವಾದ ಆವೇಶದ ಭರದಲ್ಲಿ ಅನ್ಯಧರ್ಮದ ಅವಹೇಳನ ಮಾಡಿಲ್ಲ. ಸ್ವಧರ್ಮ ನಿಷ್ಠೆ ಅನ್ಯಧರ್ಮದ ನಿಂದೆಯಲ್ಲಿ ತೊಡಗುವಂತೆ ವಿವೇಕವನ್ನು ಮಸುಳಿಸಿಲ್ಲ. ಸರಸ್ವತೀ ಮುಖ ಮುಕುರನೆಂಬ ಬಿರುದಾಂಕಿತನಾದ ಶಾಂತಿನಾಥನ ಜಿನ ವಚನವಿನಿರ್ಗತವಾದ ಸುಕುಮಾರ ಚರಿತೆಯೆಂಬ ಈ ಕಾವ್ಯ ವಾಗ್ವನಿತೆಗೆ ವಾಗ್ವಿಲಾಸವನ್ನುಂಟುಮಾಡಿದೆ; ಭಾರತೀ ಸತಿಗೆ ಮಾಡಿದ ಪೊಸ ಅಳಂಕೃತಿಯಂತೆ ಕಂಗೊಳಿಸುವ ಈ ಪುಣ್ಯಕೃತಿ ಓದಿ ಮೆಚ್ಚುವ ಸಹೃದಯರಿಗೂ, ಭಾವಿಸುವ ಭವ್ಯ ನಿವಹಕ್ಕೂ ಒಂದು ಅಗಾಧವಾದ ಬೋಧಾಕೃತಿಯಾಗಿದೆ. ಚೆಲುವಾದ ಬಂಧುರೋಕ್ತಿಗಳಿಂದ ಅಭಿವರ್ಣಿಸಿದ ಈ ಕಾವ್ಯ ಕವಿಗೆ ವೈಯಕ್ತಿಕವಾಗಿ ಹೆಮ್ಮೆಯನ್ನೂ, ಆತ್ಮತೃಪ್ತಿಯನ್ನೂ ಉಂಟುಮಾಡಿದೆಯೆಂದು ಈ ಕೆಳಗಿನ ಪದ್ಯದಿಂದ ತಿಳಿಯಬರುತ್ತದೆ:

ಪರಮಾತ್ಮಂ ನಿಷ್ಠಿತಾತ್ಮಂ ಜಿನಪತಿ ಪರಮಸ್ವಾಮಿ ಸದ್ಧರ್ಮಮಾರ್ಗಂ
ಗುರುವಂದ್ಯಂ ವರ್ಧಮಾನ ವ್ರತಿಪತಿ ಸುಕುಮಾರಂ ಕಥಾನಾಯಕಂ ತ
ಚ್ಚರಿತಂ ಕಾವ್ಯಂ ಮದೀಯಾನುಜನನುಬಲವೆಂದದೆ ದಲ್
ಮದ್ವಚೋವಿ
ಸ್ತರ ವಿನ್ಯಾಸಂ ಬಲಂಬೆತ್ತುದು ಪೆಱರ್ಗದನಿಂತಂತೆನಲ್ಕೆಂತು ತೀರ್ಗುಂ"

ಛಂದಸ್ಸು

ಎರಡು ಅಂಶಗಣ ಘಟಿತ ತ್ರಿಪದಿಗಳು
ಒಂದು ಅಂಶಗಣ ಘಟಿತ ಅಪೂರ್ವ ಷಟ್ಪದಿ
ಎಂಟು ಪಿರಿಯಕ್ಕರಗಳೂ, ನಾಲ್ಕು ರಗಳೆಗಳೂ ಇವೆ.

ತ್ರಿಪದಿಗಳು

೧. ಪುರಬಹಿರ್ಭಾಗ ವಿಸ್ತರಿತ ನಂದನದೊಳಂ
ಕುರಿತ ಪಲ್ಲವಿತ ಮುಕುಳಿತ ಕುಸುಮಿತಾ
ಪರಿಮಿತ ಫಲಿತ ತರುಗಳೆ ॥

೨. ಬಿಸಪಂ ನಿಧಾನಮಂ ಪಡೆದಂತೆ ಕುರುಡಂ ಕ
ಣ್ಪಡೆದಂತೆ ಮನದೊಳ್ ಪಿರಿದುಮುತ್ಸಾಹಮಂ
ಪಡೆದಳಾತ್ಮಜರ ಬರವಿಂದೆ ॥

ಶೈಲಿ

ಶಾಂತಿನಾಥ ಕವಿಯ ಶೈಲಿ, ಪದಬಂಧ, ಪದಪವಣಿಕೆಯ ಪ್ರೌಢಿಮೆ ಕನ್ನಡದ ಹಿರಿಯ ಕವಿಗಳ ಶೈಲಿಗೆ ಯಾವುದರಲ್ಲೂ ಕಡಿಮೆಯಲ್ಲ. ಪಂಪನ ಹಿತಮಿತ ವಚನ, ರನ್ನಕವಿಯ ವಾಗ್ಝರಿ

ರಣೆಯ ಶಕ್ತಿ, ಜನ್ನನ ಕಥಾ ನಿರೂಪಣಾ ಕೌಶಲ, ಕುಮಾರ ವ್ಯಾಸ – ಹರಿಹರ ಭಕ್ತಿ - ಎಲ್ಲವೂ ಶಾಂತಿನಾಥನಲ್ಲಿ ಇವೆ. ವಾಯು ಭೂತಿ ತನ್ನ ಮಾವನನ್ನು ಕುರಿತು ಧಿಕ್ಕರಿಸಿ ಅವಹೇಳನ ಮಾಡುವ ಈ ಕೆಳಗಿನ ಪದ್ಯದಲ್ಲಿ ಅವನ ಪ್ರತೀಕಾರ ಭಾವ ಮಾತುಗಳಲ್ಲಿ ಹೇಗೆ ಮೂಡಿದೆ ನೋಡಿ:

ಮನೆಯೊಳ್ಮಯ್ಮೆಗೆ ಬಾತುಕೊಂಡ ಸಿರಿಯೊಳ್ಕಣ್ಣಾಣದೊಡ್ಡಯ್ಸುವಂ
ದಿನ ನೀಮಾರ್ಗೆಲೆ ನಿಮ್ಮನಾವಱಿಯೆಮೆಂದೆಮ್ಮಂ ತೊಡಂಕಿಕ್ಕುವಂ
ದಿನ ಭಿಕ್ಷಾನ್ನಮನಿಕ್ಕುವಲ್ಲಿ ಸತಿಯುಂ ಬೇಡೆಂದು ಕಣ್ಕೆತ್ತುವಂ
ದಿನ ಸೊರ್ಕ್ಕಕ್ಕಟ ಮುಕ್ಕುವೋಗಿ ಕಡೆಯೊಳ್ ಭೈಕ್ಷಕ್ಕೆ ಪಕ್ಕಾದಿರೇ.

ಎಂದು ತಾರಸ್ವರದಲ್ಲಿ ರೋಷವನ್ನು ಕಾರಿದುದಾಗಲಿ,

ಜನನಿಯೊಡವುಟ್ಟಿದಂ ಮಾ
ವನುಪಾಧ್ಯಾಯಂ ಮುನೀಶ್ವರಂ ದಯೆಯಿಂ ನಿ
ನ್ನನೆ ಪರಸಲ್ಬಿಜಯಂಗೆಯೆ
ನೀನುದಾಸೀನನಾಗಿ ಕಡೆಗಣಿಸುವುದೇ?

ಎಂದು ಮೃದುವಾಗಿ ಬುದ್ಧಿ ಹೇಳಿದಂತೆ ಪ್ರಶ್ನಿಸುವುದಾಗಲಿ ಭಾವಪೂರ್ಣವಾಗಿ ಬಂದಿದೆ. ಶಾಂತಿನಾಥ ಕವಿ ಅಂತರಂಗದ ಭಾವನೆಗಳನ್ನು ಸಹಜವಾಗಿ ತಕ್ಕ ಮಾತುಗಳಿಂದ ಮೂಡಿಸಬಲ್ಲ. ಹುಟ್ಟುಕುರುಡಿಯಾದ ಹೊಲೆಯರ ಹುಡುಗಿ ಎಷ್ಟು ಹೊಲಸಾಗಿದ್ದಳೆಂಬುದನ್ನು ಕಣ್ಣಿಗೆ ಕಟ್ಟುವಷ್ಟು ನಿಚ್ಚಳವಾಗಿ ಅವರೆ. ಅನುಕಂಪ ಚಿಮ್ಮುವಂತೆ ಹೃದಯ ವಿದ್ರಾವಕವಾಗಿ ವರ್ಣಿಸಬಲ್ಲ. ತನ್ನ ಸೋದರನ ಹಿಂಬೀಳುಗಳು ಅಗ್ನಿಭೂತಿ ಮುನಿಯ ಹೃದಯದಲ್ಲಿ ಹೊಮ್ಮಿ ಹರಿಯುವ ಕಾರುಣ್ಯಗಂಗೆ ಸಹೃದಯರ ಚಿತ್ತವನ್ನು ಕಲಕುವಂತೆ ಕವಿ ನಿರೂಪಿಸಬಲ್ಲ. ತೀಕ್ಷ್ಣವಾದ

ಮೂದಲೆಯನ್ನು, ತಿವಿಯುವ ವ್ಯಂಗ್ಯೋಕ್ತಿಗಳನ್ನು ಆತ ಚೆನ್ನಾಗಿ ಬಳಸುತ್ತಾನೆ :

ನೀಂ ಬೇವಾದೊಡೆ ನಿನ್ನ ಕು
ಟುಂಬಿನಿಯುಂ ಕಯ್ಪೆಸೊರೆಯ ಕುಡಿಯೇಂ ಮಿಡಿಯೇ
ನೆಂಬಂತೆ ದರಸಿಯಾದಳಿ
ದೇಂ ಬಳ್ವಳ ಬಳೆದ ಬಂಧುತನಮಿನಿದಾಯ್ತೊ!

ಎಂಬಲ್ಲಿಯಂತೂ ವಾಯುಭೂತಿಯ ಆಂತರಿಕ ಪ್ರತೀಕಾರ ಮನೋಭಾವ ವಿಡಂಬನೆ ಅತ್ಯಂತ ಸಹಜವಾಗಿ, ನಾಟಕೀಯ ವಾಗಿ ಒಡಮೂಡಿದೆ. ಕವಿ ಹೇಗೆ ಭೋಗ-ರಾಗಗಳನ್ನೂ ಹಾಡ ಬಲ್ಲನೋ ಹಾಗೆ ವೀತರಾಗನನ್ನೂ ಸ್ತೋತ್ರಮಾಡಬಲ್ಲ.

ಉದಾಹರಣೆಗೆ ಈ ಕೆಳಗಿನ ಪದ್ಯದಲ್ಲಿನ ಜಿನಸ್ತೋತ್ರ ರತ್ನಾ ಕರವರ್ಣಿಯ ನಿರಂಜನ ಸ್ತುತಿಯನ್ನು ನೆನಪಿಗೆ ತರುತ್ತದೆ. ಅಲ್ಲದೆ ಅದರ ಪ್ರಾಸಾನುಪ್ರಾಸದ ಸೊಗಸು, 'ನ' ಕಾರದ ಪುನರಾವರ್ತನೆ ಭಕ್ತಿಗೆ ಗೀತದ ಸೊಗಸನ್ನು ಕೂಡಿಸಿದೆ :

ಜಯಜಯ ವಾಸುಪೂಜ್ಯ ಸುರಪೂಜ್ಯ ಜಿನೇಶ್ವರ ವೀತರಾಗ ನಿ
ರ್ಭಯ ನಿರವದ್ಯ ನಿರ್ಜಿತ ನಿರಂಜನ ನಿರ್ಮಲ ನಿಷ್ಕಲಂಕ ನಿ
ರ್ನಯ ನಿರಪಾಯ ನಿರ್ಜನನ ನಿಃಸ್ಪೃಹ ನಿರ್ಮಮ ನಿರ್ವಿಕಲ್ಪ ನಿ
ಷ್ಕ್ರಿಯ ನಿರಪೇಕ್ಷ ನಿನ್ನ ಚರಣಂ ಶರಣಕ್ಕೆಮಗಿಂ ಜಿನೇಶ್ವರಾ.

ಇದರಂತೆ ಸುಕುಮಾರನ ಮಡದಿಯರು ಗಂಡನನ್ನು ಅರಸಿ ಅರಸಿ ಕಾಣದೆ ಹಂಬಲಿಸುತ್ತಾ ಗೋಳಿಡುವ ಪದ್ಯ,

ವರಪುಣ್ಯಾಧಾರನಂ ಕಂಡಿರೆ ಗುಣಧರನಂ ಕಂಡಿರೇ ಭೋಗಿಯಂ ಕಂ
ಡಿರೆ ಲಕ್ಷ್ಮೀಕಾಂತನಂ ಕಂಡಿರೆ ವಿಶದಯಶೋರಾಶಿಯಂ ಕಂಡಿರೇ ಸೌಂ

ದರ ದಿವ್ಯಾಕಾರನಂ ಕಂಡಿರೆ ಸುಖಮಯನಂ ಕಂಡಿರೇ ರೂಪವಿದ್ಯಾ
ಧರನಂ ನೀಮಾರುಮೇಂ ಕಂಡಿರೆ ಮನಸಿಜನಂ ಕಂಡಿರೇ ಪೇೞಿ
ಮೊಗಳ್ ॥

(ಇದು ಮಹಾಕವಿ ಪಂಪನ ಆದಿಪುರಾಣದ ಪ್ರಭಾವ)

ಇವಲ್ಲದೆ ಕಾವ್ಯದಲ್ಲಿ ಅನೇಕ ಕಡೆ ಗಾದೆ ಮಾತುಗಳು ಸಹಜ ಚೆಲುವಿನಿಂದ ಅರಳಿ ನಿಂತಿವೆ. ಉದಾಹರಣೆಗೆ, ಪುತ್ತುಂ ಬತ್ತಲೆಯಂ ಬಱಿದಿಲ್ಲ; ಕಯ್ಪುಸೊರೆಯು ಕುಡಿಯೇಂ ಮಿಡಿಯೇಂ; ಪುಲಿ ಬಾವಿಯೊಳ್ ಬಿರ್ದುದನಱಿದೊಡೆ ಗುಂಡುಗೊಂಡು ಕೊಂದಿಕ್ಕುಗುಮಲ್ಲದೆ ಪಿಡಿದು ತೆಗೆವರಾರ್? ಗಗನ ಪ್ರಯಾಣಮಂ ತಳದೊಳಳೆದು ಕಂಡರುಮೊಳರೆ? ಬಡವಂ ನಿಧಾನಮಂ ಪಡೆದಂತೆ, ಕುರುಡಂ ಕಣ್ಬಡೆದಂತೆ – ಮೊದಲಾದುವು

ಹೀಗೆ ಶಾಂತಿನಾಥ ಕವಿ ವಸ್ತು, ಶೈಲಿ, ಕಲೆಗಾರಿಕೆ, ಪ್ರತಿಭೆ, ಪಾಂಡಿತ್ಯ – ಎಲ್ಲ ದೃಷ್ಟಿಯಿಂದಲೂ ಹನ್ನೊಂದನೆಯ ಶತಮಾನದ ಕನ್ನಡ ಸಾಹಿತ್ಯದ ಸಂಪತ್ತನ್ನು ಬಹುಮಟ್ಟಿಗೆ ಹೆಚ್ಚಿಸಿದ ಸಮರ್ಥ ಕವಿ; ಪಂಪನಂತೆ ಸವ್ಯಸಾಚಿಯಾಗಿ, ರನ್ನ-ಜನ್ನರಂತೆ ಶಾಸನ ಕವಿಯಾಗಿ ಕನ್ನಡದ ಬಾವುಟವನ್ನು ಎತ್ತಿಹಿಡಿದು ಈ ಹಿರಿಯಕವಿ ವಿಜೃಂಭಿಸಿದ.

ವಿಪುಲ ಪದರಚನೆ ಪದರಚ
ನೆ ಪೊಚ್ಚ ಪೊಸ ದೇಸೆ ದೇಸೆ ಪೊಸ ಬಗೆ ಬಗೆ ರಂ।
ಜಿಪ ರಸಿಕತೆ ರಸಿಕತೆ ಕುಸಿ
ವ ಪಸರಿಸುವ ರೀತಿ ರೀತಿಯೆನೆ ಮೆಚ್ಚಿದರಾರ್ ॥

ಪ್ರಚಾರೋಪನ್ಯಾಸ ಮಾಲೆ

1.	ನಗೆಯ ನೆಲೆ	ಎಸ್. ಕೆ. ರಾಮಚಂದ್ರರಾವ್
2.	ನಕ್ಷತ್ರ ಲೋಕ	ಜಿ. ಟಿ. ನಾರಾಯಣರಾವ್
3.	ಭಯ – ಸರಳ ವಿಶ್ಲೇಷಣೆ	ಎಂ. ಶಿವರಾಂ
4.	ಶ್ರೀ ಕವಿ ಲಕ್ಷ್ಮೀಶ	ಜಿ. ಎಸ್. ಸಿದ್ಧಲಿಂಗಯ್ಯ
5.	ಶಾಂತಿನಾಥ ಕವಿ	ಕಮಲಾ ಹಂಪನಾ
6.	ಉತ್ತಂಗಿ ಚೆನ್ನಪ್ಪ	ಸ. ಸ. ಮಾಳವಾಡ
7.	ಬಯಲಾಟಗಳು	ಚಂದ್ರಶೇಖರ ಕಂಬಾರ
8.	ನಾಟಕದಲ್ಲಿ ನವ್ಯತೆ	ಪಿ. ಲಂಕೇಶ್
9.	ದ್ರಾವಿಡ ಸಂಖ್ಯಾವಾಚಕಗಳು	ಹಂಪ. ನಾಗರಾಜಯ್ಯ
10.	ಉಪಭಾಷೆ	ಕೃಷ್ಣ ಪರಮೇಶ್ವರ ಭಟ್ಟ
11.	ಅರವಿಂದರ ವಿಚಾರಧಾರೆ	ಸಿ. ಕೆ. ವೆಂಕಟರಾಮಯ್ಯ
12	ಪೂರ್ಣಯೋಗಿ ಶ್ರೀ ಅರವಿಂದರು	ಕೋ. ಚೆನ್ನಬಸಪ್ಪ
13.	ಪ್ರಾಚೀನ ಸಂಸ್ಕೃತಿ	ಎಸ್. ಕೆ. ರಾಮಚಂದ್ರರಾವ್
14.	ಪ್ರಾಚೀನ ಭಾರತದ ಆರ್ಥಿಕ ವ್ಯವಸ್ಥೆ	ಎನ್. ಜಿ. ಚಂದ್ರಶೇಖರಯ್ಯ
15.	ಸಣ್ಣ ಕೈಗಾರಿಕೆಗಳು	ಆರ್. ಎಸ್. ಆರಾಧ್ಯ
16.	ವಿವಾಹ ಪದ್ಧತಿಗಳು	ಎಸ್. ಕೆ. ರಾಮಚಂದ್ರರಾವ್
17.	ಪಾನೀಯಗಳು	ಕೆ. ಎಸ್. ಲಕ್ಷ್ಮಣರಾವ್
18.	ಚಂದ್ರಲೋಕ ಯಾತ್ರೆ	ಪಿ. ಎಸ್. ವೆಂಕಟಸ್ವಾಮಿ ಶೆಟ್ಟಿ
19.	ಬೆಳಕಿನ ಸ್ವರೂಪ	ಬಿ. ವಿ. ನಾರಾಯಣರಾವ್
20.	ದೂರದರ್ಶನ	ಕೆ. ಶೇಷಾದ್ರಿ ಅಯ್ಯಂಗಾರ್
21.	ಸೂಕ್ಷ್ಮದರ್ಶಕಗಳು ಮತ್ತು ದೂರದರ್ಶಕಗಳು	ಕೆ. ಶೇಷಾದ್ರಿ ಅಯ್ಯಂಗಾರ್
22.	ಕುರುಡು	ಎಸ್. ಟಿ. ಪುಟ್ಟಣ್ಣ
23.	ಕಣ್ಣಿನ ರೋಗಗಳು	ಎಸ್. ಟಿ. ಪುಟ್ಟಣ್ಣ
24.	ಕ್ಷಯ	ಎಂ. ಬಸವರಾಜೆ ಅರಸು
25.	ಮೂತ್ರಪಿಂಡದ ಕೆಲವು ರೋಗಗಳು	ಎಂ. ಬಸವರಾಜೆ ಅರಸು
26.	ಉಕ್ಕು : ತಯಾರಿಕೆ ಮತ್ತು ರಚನೆ	ಕೆ. ಆರ್. ಮೋಹನ್
27.	ನೀರ ವರಿ ಸಮಸ್ಯೆಗಳು	ಕೆ. ಎನ್. ಶಿವಶಂಕರರಾವ್
28.	ಅಂತರ್ಜಲ	ಸಿ. ನಾಗಣ್ಣ